# ಪುಣಜನೂರು ಪಂಚಾಯಿತಿ ಗ್ರಾಮಗಳ ಸಮಗ್ರ ಅಧ್ಯಯನ ವರದಿ

**ಏಪ್ರಿಲ್ 2011 – ಏಪ್ರಿಲ್ 2012**




## ಪುನರ್ಚಿತ್

**ಚಂದನಪುರಂ (ಕುಂಬಾರಗುಂಡಿ),**

**ಮೂಕನಪಾಳ್ಯ ಅಂಚೆ, ಚಾಮರಾಜನಗರ ತಾಲ್ಲೂಕು**

**ಚಾಮರಾಜನಗರ ಜಿಲ್ಲೆ –571127**


# ಪುಣಜನೂರು ಪಂಚಾಯಿತಿ ಗ್ರಾಮಗಳ ಸಮಗ್ರ ಅಧ್ಯಯನ ವರದಿ

ಪುನರ್ಚಿತ್ ಕಾರ್ಯಚಟುವಟಿಕೆಗಳ ಭಾಗವಾಗಿ ಚಾಮರಾಜನಗರ ಜಿಲ್ಲೆಯ ಪುಣಜನೂರು ಪಂಚಾಯಿತಿಯ ೨೫ ಗ್ರಾಮಗಳ ಪೈಕಿ, ೧೭ ಗ್ರಾಮಗಳಿಗೆ ಸುಮಾರು ಹದಿನೈದರಿಂದ ಇಪ್ಪತ್ತು ಭೇಟಿಗಳನ್ನು ನೀಡಿಲಾಗಿದೆ. ಈ ಭೇಟಿಗಳಲ್ಲಿ ವಿವಿಧ ಗ್ರಾಮಸ್ಥರು, ಯುವಜನರು, ಪಂಚಾಯಿತಿ ಸದಸ್ಯರು, ಶಿಕ್ಷಕರು ಹಾಗೂ ವಿವಿಧ ಸಂಘ ಸಂಸ್ಥೆಗಳ ಸದಸ್ಯರನ್ನು ವೈಯಕ್ತಿಕವಾಗಿ ಮತ್ತು ಗುಂಪು ಚರ್ಚೆ ಹಾಗೂ ಅವಲೋಕನದ ಮೂಲಕ ಅಲ್ಲಿನ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಇವೇ ಮುಂತಾದ ಅಂಶಗಳನ್ನು ಕುರಿತು ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಜೊತೆಗೆ ವಿವಿಧ ಗ್ರಾಮಗಳ ಹಬ್ಬ-ಜಾತ್ರೆಗಳಲ್ಲಿ ಪಾಲ್ಗೊಂಡು ಅಲ್ಲಿನ ಸಾಂಸ್ಕೃತಿಕ ವೈವಿಧ್ಯತೆಯನ್ನು ಅರ್ಥಮಾಡಿಕೊಳ್ಳಲಾಗಿದೆ. ಈ ಅಧ್ಯಯನವನ್ನು ಏಪ್ರಿಲ್ ೨೦೧೧ ರಿಂದ ಏಪ್ರಿಲ್ ೨೦೧೨ ರವರೆಗೆ ಮಾಡಲಾಗಿದ್ದು, ಸಂಗ್ರಹಿಸಿದ ಮಾಹಿತಿಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಈ ವರದಿಯನ್ನು ಸಿದ್ಧಪಡಿಸಲಾಗಿದೆ.

ಈ ವರದಿಯನ್ನು ಪುನರ್ಚಿತ್ ತಂಡದ ಸದಸ್ಯರಾದ **ಟಿ. ಶಿವನಂಜು, ಪಿ.ವೀರಭದ್ರನಾಯ್ಕ, ಎ.ಆರ್.ವಾಸವಿ** ರವರು ಸಿದ್ಧಪಡಿಸಿರುತ್ತಾರೆ.

# ಪುಣಜನೂರು ಪಂಚಾಯಿತಿ ಗ್ರಾಮಗಳ ಸಮಗ್ರ ಅಧ್ಯಯನ ವರದಿ

ಚಾಮರಾಜನಗರ ಜಿಲ್ಲೆಯ ಪುಣಜನೂರು ಪಂಚಾಯಿತಿಯ ಗ್ರಾಮಗಳಲ್ಲಿರುವ ವಿವಿಧ ಸಮುದಾಯಗಳನ್ನು ಅರ್ಥೈಸಿಕೊಳ್ಳುವ ಉದ್ದೇಶದಿಂದ ಕ್ಷೇತ್ರಾಧ್ಯಯನ ಮಾಡಲಾಗಿದೆ. ಪುಣಜನೂರು ಜಿಲ್ಲೆಯ ದಕ್ಷಿಣ ಭಾಗದಲ್ಲಿದ್ದು, ಕರ್ನಾಟಕ ಹಾಗೂ ತಮಿಳುನಾಡಿನ ಗಡಿ ಪ್ರದೇಶವಾಗಿದೆ. ಈ ಪ್ರದೇಶವು ಪುಣಜನೂರು ಮತ್ತು ಬಿಳಿಗಿರಿ ರಂಗನ ಬೆಟ್ಟ (ಬಿಆರ್‌ಟಿ) ಅರಣ್ಯ ವಲಯಗಳನ್ನು ಹೊಂದಿದೆ. ಇಲ್ಲಿ ಸುವರ್ಣಾವತಿ ಜಲಾಶಯಕ್ಕೆ ಬೇಡಗುಳಿ ಬೆಟ್ಟಗಳಿಂದ ಹರಿಯುವ ಹಳ್ಳ, ಪುಣಜನೂರು ಹೊಳೆ, ಮುಖ್ಯ ನೀರಿನ ಮೂಲವಾಗಿವೆ. ಈ ಪ್ರದೇಶವು ಸುಮಾರು ನಾಲ್ಕೈದು ತಲೆಮಾರುಗಳ ಹಿಂದೆ ದಟ್ಟವಾದ ಅರಣ್ಯವಾಗಿದ್ದು, ನಂತರ ಅಲ್ಲಲ್ಲಿ ಜನವಸತಿ ಪ್ರದೇಶಗಳಾಗಿ ಮಾರ್ಪಟ್ಟಿದೆ. ಪುಣಜನೂರು ಹಿಂದೆ ವೆಂಕಟಯ್ಯನ ಛತ್ರದ ಮಂಡಲ ಪಂಚಾಯಿತಿಗೆ ಸೇರಿತ್ತು. ನಂತರ ೧೯೯೪-೯೫ನೇ ಸಾಲಿನಲ್ಲಿ ಪುಣಜನೂರು ಪಂಚಾಯಿತಿ ಆಗಿ ಪ್ರಾರಂಭವಾಗಿದ್ದು, ೨೫ ಜನವಸತಿ ಪ್ರದೇಶಗಳು ಮತ್ತು ೦೧ ಬೇಚರೆ ಗ್ರಾಮವನ್ನು ಒಳಗೊಂಡಿದೆ. ಈ ಪಂಚಾಯತಿಯಲ್ಲಿ ೧೯೯೪-೯೫ ರಿಂದ ಈವರೆಗೆ ಪರಿಶಿಷ್ಟ ಜಾತಿಯ ಮೂವರು, ಪರಿಶಿಷ್ಟ ವರ್ಗಗಳ ಮೂವರು ಹಾಗೂ ಅಲ್ಪಸಂಖ್ಯಾತ ಸಮುದಾಯದಿಂದ ಇಬ್ಬರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಗ್ರಾಮಗಳ ಪಟ್ಟಿಯನ್ನು ಅನುಬಂಧ ೧ ಮತ್ತು ಗ್ರಾಮ ಪಂಚಾಯಿತಿ ಸದಸ್ಯರ ಪಟ್ಟಿಯನ್ನು ಅನುಬಂಧ ೨ ರಲ್ಲಿ ನೀಡಲಾಗಿದೆ.



ಪುಣಜನೂರು ಪಂಚಾಯಿತಿ ಗ್ರಾಮಗಳಲ್ಲಿ ಸೋಲಿಗ, ಲಂಬಾಣಿ, ಆದಿಕರ್ನಾಟಕ, ನಾಯಕ, ಮುಸ್ಲಿಂ, ಕುಂಬಾರ, ಅಗಸ, ವಿಶ್ವಕರ್ಮ, ಈಡಿಗ, ಬಡಗ ಹಾಗೂ ಲಿಂಗಾಯಿತ ಸಮುದಾಯಗಳಿವೆ. ಇವರಲ್ಲಿ ಸೋಲಿಗ ಮತ್ತು ಲಂಬಾಣಿ ಸಮುದಾಯದವರು ಹೆಚ್ಚಿನ ಪ್ರಮಾಣದಲ್ಲಿದ್ದು, ತಮ್ಮದೇ ಆದ ಭಾಷೆ, ಸಂಸ್ಕೃತಿಗಳನ್ನು ಹೊಂದಿದ್ದಾರೆ. ಇಲ್ಲಿನ ಜನರು ತಮ್ಮ ಮನೆಗಳಲ್ಲಿ ತಮ್ಮದೇ ಆದ ಬಂಜಾರ (ಲಂಬಾಣಿ), ಸೋಲಿಗ, ಬಡಗ, ತಮಿಳು, ಉರ್ದು ಭಾಷೆಗಳನ್ನು ಮಾತನಾಡುತ್ತಾರೆ. ವ್ಯವಹಾರಿಕ ಮತ್ತು ಆಡಳಿತ ಭಾಷೆಯಾಗಿ ಕನ್ನಡ ಭಾಷೆಯನ್ನು ಬಳಸುತ್ತಾರೆ. ಈ ಪ್ರದೇಶವು ತಮಿಳುನಾಡು ಗಡಿ ಪ್ರದೇಶವಾದ ಕಾರಣ ತಮಿಳು ಭಾಷೆಯ ಪ್ರಭಾವ ಹೆಚ್ಚಾಗಿದ್ದು, ಕೇರಳದ ಕಡೆ ವಲಸೆ ಹೋಗುವವರು ಮಲೆಯಾಳಂ ಭಾಷೆಯನ್ನು ಮಾತನಾಡುತ್ತಾರೆ. ೨೦೧೧ ರ ಜನಗಣತಿ ಮಾಹಿತಿಯನ್ವಯ ಇಲ್ಲಿಯ ಒಟ್ಟು ಜನಸಂಖ್ಯೆ ೮,೦೧೯ ಇದ್ದು, ೪,೧೨೨ ಪುರುಷರು ಮತ್ತು ೩,೮೯೭ ಮಹಿಳೆಯರು ಇದ್ದಾರೆ.

ಈ ಪ್ರದೇಶವು ರಾಜ್ಯ ಮತ್ತು ಜಿಲ್ಲೆಯ ಗಡಿ ಪ್ರದೇಶವಾಗಿದ್ದು, ರಾಷ್ಟ್ರೀಯ ಹೆದ್ದಾರಿ ಎನ್.ಎಚ್.೨೦೯ನ್ನು ಹೊಂದಿದ್ದು, ಅಂತರ್ ರಾಜ್ಯ ವಾಹನಗಳ ಸಂಚಾರ ಹೆಚ್ಚಾಗಿದೆ. ಪುಣಜನೂರಿನಲ್ಲಿ ಪೋಲೀಸ್ ಇಲಾಖೆ, ಪ್ರಾದೇಶಿಕ ಸಾರಿಗೆ ಸಂಸ್ಥೆ (ಆರ್.ಟಿ.ಓ), ಅರಣ್ಯ ಇಲಾಖೆ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ (ಆರ್.ಎಂ.ಸಿ) ಚೆಕ್ ಪೋಸ್ಟುಗಳಿವೆ. ಪುಣಜನೂರು ಮತ್ತು ಕೋಳಿಪಾಳ್ಯ ಗ್ರಾಮಗಳಲ್ಲಿ ವ್ಯಾಪಾರ ವಹಿವಾಟುಗಳಿಗೆ ಅನುಕೂಲವಾಗಿದ್ದು, ರಸ್ತೆ ಬದಿಯಲ್ಲಿ ಹೋಟೆಲ್‌ಗಳು, ಅಂಗಡಿಗಳು, ಕೋಳಿ ಮಾಂಸದ ಅಂಗಡಿಗಳು ಹಾಗೂ ಒಂದು ವೈನ್‌ಶಾಪ್ ಇದೆ. ಈ ರೀತಿಯ ವ್ಯಾಪಾರದಲ್ಲಿ ಲಂಬಾಣಿ, ಮುಸ್ಲಿಂ ಹಾಗೂ ಲಿಂಗಾಯಿತ ಸಮುದಾಯದ ಕೆಲವು ಕುಟುಂಬಗಳು ತೊಡಗಿಸಿಕೊಂಡಿದ್ದಾರೆ. ಇದಲ್ಲದೆ ಕೆಲವರು ವ್ಯವಸಾಯದ ಉತ್ಪನ್ನಗಳು, ತರಕಾರಿ, ಹುಣಸೆ ಹಣ್ಣು ಮುಂತಾದ ಸಣ್ಣಪುಟ್ಟ ವ್ಯಾಪಾರಗಳನ್ನು ಮಾಡುತ್ತಾರೆ. ಇಲ್ಲಿನ ಗಿರಿಜನರು ಕಾಡಿನ ಉಪ ಉತ್ಪನ್ನಗಳನ್ನು (ಜೇನು, ನೆಲ್ಲಿಕಾಯಿ, ಪಾಸೆ, ಅಂಟುವಾಳ, ಮಾಗಳಿ ಬೇರು, ಒಣ ಕಟ್ಟಿಗೆ ಇತ್ಯಾದಿ) ಸಂಗ್ರಹಿಸಿ ಮಾರಾಟ ಮಾಡುತ್ತಾರೆ.

ಈ ಪ್ರದೇಶದ ಬಹುತೇಕ ಜನರು ಕೂಲಿಯನ್ನು ಅವಲಂಬಿಸಿದ್ದು, ಸ್ಥಳೀಯ ತೋಟ ಮತ್ತು ಜಮೀನುಗಳಲ್ಲಿ ದುಡಿಯುವುದಲ್ಲದೆ, ತಮಿಳುನಾಡು, ಕೇರಳ, ಬೆಂಗಳೂರು ಕಡೆ ವಲಸೆ ಹೋಗುತ್ತಾರೆ. ಲಂಬಾಣಿ, ಸೋಲಿಗ ಮತ್ತು ಬಡಗ ಸಮುದಾಯದ ಯುವ ಜನರಲ್ಲಿ ಚಲನೆ (ಮೊಬಿಲಿಟಿ) ಹೆಚ್ಚಾಗಿದ್ದು, ವಲಸೆ ಪ್ರಮಾಣ ಕೂಡ ಹೆಚ್ಚಾಗಿದೆ. ಇವರು ಆರ್ಥಿಕ ಆದಾಯದ (ಕ್ಯಾಷ್ ಎಕಾನಮಿ) ಕಡೆ ಹೆಚ್ಚು ಗಮನ ನೀಡುತ್ತಿದ್ದು, ಇವರು ತಮಿಳುನಾಡಿನ ಸೇಲಂ, ತಿರುಪೂರು, ಕೊಯಮುತ್ತೂರು, ಕೇರಳ, ಬೆಂಗಳೂರು, ಮೈಸೂರು, ಕೊಡಗು, ಚಾಮರಾಜನಗರ ಮತ್ತು ಪುಣಜನೂರು ಪಂಚಾಯಿತಿ ವ್ಯಾಪ್ತಿಗೆ ಸೇರಿದ ಅತ್ತಿಖಾನೆ, ಹೊನ್ನಮೇಟಿ ಮತ್ತು ಬೇಡಗುಳಿ ಎಸ್ಟೇಟ್ ಇವೇ ಮುಂತಾದ ಸ್ಥಳಗಳಲ್ಲಿ ಬಟ್ಟೆ ಗಿರಣಿ,

ಗಾರ್ಮೆಂಟ್ಸ್, ಹೋಟೆಲ್, ಅಂಗಡಿ ವ್ಯಾಪಾರ, ಮತ್ತು ವೈನ್ ಶಾಪ್, ಬೇಕರಿ ಕೆಲಸಗಳು, ಸಿಡಿ ಮತ್ತು ಕ್ಯಾಸೆಟ್ ಮಾರಾಟ, ರಸ್ತೆ ಮತ್ತು ಕಾಲುವೆ ಕೆಲಸಗಳು ಹಾಗೂ ಕಾಫಿ ತೋಟದ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇವರಿಗೆ ದಿನವೊಂದಕ್ಕೆ ೧೦೦ ರಿಂದ ೪೦೦ ರೂ ಗಳವರೆಗೂ ಕೂಲಿ ಸಂಪಾದನೆ ಮಾಡುತ್ತಾರೆ. ಈ ರೀತಿ ಸಂಪಾದನೆ ಮಾಡಿದ ಹಣವನ್ನು ಕೆಲವು ದಿನಗಳವರೆಗೆ ಖರ್ಚು ಮಾಡಿ ಮತ್ತೆ ಕೂಲಿಗೆ ಹೋಗುತ್ತಾರೆ. ಹೀಗೆ ವಲಸೆ ಹೋಗುವ ಯುವ ಜನರು ಮತ್ತು ಕೆಲವು ಕುಟುಂಬದ ಸದಸ್ಯರು ಹಬ್ಬ, ಜಾತ್ರೆ, ಮದುವೆ, ಸಾವು ಮುಂತಾದ ಸಂದರ್ಭಗಳಲ್ಲಿ ತಮ್ಮ ಸ್ವ ಗ್ರಾಮಗಳಿಗೆ ವಾಪಸ್ಸಾಗುತ್ತಾರೆ.

## ಶೈಕ್ಷಣಿಕ ಸ್ಥಿತಿ

೨೦೧೧-೧೨ನೇ ಸಾಲಿನಲ್ಲಿ ಈ ಪಂಚಾಯಿತಿ ವ್ಯಾಪ್ತಿಯಲ್ಲಿ ೧೯ ಅಂಗನವಾಡಿ ಕೇಂದ್ರಗಳು, ೧೩ ಸರ್ಕಾರಿ ಕಿರಿಯ ಪ್ರಾಥಮಿಕ (೮ ಶಿಕ್ಷಣ ಇಲಾಖೆ, ೫ ಆಶ್ರಮ ಶಾಲೆಗಳು) ಹಾಗೂ ೨ ಹಿರಿಯ ಪ್ರಾಥಮಿಕ ಶಾಲೆಗಳಿದ್ದು, ಒಟ್ಟು ೮೫೩ ಮಕ್ಕಳಿದ್ದಾರೆ (ಬಾಲಕರು : ೪೬೯, ಬಾಲಕಿಯರು : ೩೮೭). ಒಂದು (೦೧) ಸರ್ಕಾರಿ ಪ್ರೌಢಶಾಲೆ ಮತ್ತು ಒಂದು (೦೧) ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿವೆ. ಪ್ರೌಢಶಾಲೆಗಳ ಮಕ್ಕಳ ಸಂಖ್ಯೆ ಒಟ್ಟು ೨೯೦ (ಬಾಲಕರು : ೧೬೧, ಬಾಲಕಿಯರು : ೧೨೯). ಈ ಭಾಗದಲ್ಲಿ ಸೋಲಿಗ, ಲಂಬಾಣಿ, ಬಡಗ, ಉರ್ದು ಭಾಷೆಗಳು ಮಕ್ಕಳ ಮಾತೃಭಾಷೆಗಳಾವೆ.  ಶಾಲೆಗಳಲ್ಲಿ ಕಲಿಯುವ ಭಾಷೆ ಕನ್ನಡ ಮಾಧ್ಯಮವಾಗಿದ್ದು, ಕಲಿಕೆಯಲ್ಲಿ ಮಕ್ಕಳು ಭಾಷಾ ಸಮಸ್ಯೆ ಎದುರಿಸುತ್ತಿದ್ದಾರೆ. ಕಾಲೇಜು ಹಂತದ ಶಿಕ್ಷಣ ಪಡೆಯುತ್ತಿರುವವರು ಆಂಗ್ಲ ಭಾಷಾ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸ್ಥಳೀಯವಾಗಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಪಡೆಯಲು ಸಮಸ್ಯೆಗಳು ಇಲ್ಲ. ಆದರೆ ರಂಗಸಂದ್ರ, ಕುಳ್ಳೂರು, ಬೇಡಗುಳಿಯಂತಹ ಪ್ರದೇಶಗಳಿಗೆ ಸರಿಯಾದ ಬಸ್ ಸೌಲಭ್ಯವಿಲ್ಲದ ಕಾರಣ ಹೆಣ್ಣು ಮಕ್ಕಳು ಪ್ರೌಢಶಾಲಾ ಶಿಕ್ಷಣ ಪಡೆಯಲು ಸಮಸ್ಯೆ ಇದೆ. ಇಲ್ಲಿನ ಕೆಲವು ಜನರು ಖಾಸಗಿ ಶಿಕ್ಷಣ ಸಂಸ್ಥೆಗಳ ವ್ಯಾಮೋಹಕ್ಕೆ ಒಳಗಾಗಿದ್ದು ಕೆಲವರು ತಮ್ಮ ಮಕ್ಕಳನ್ನು ಅಂಕನಶೆಟ್ಟಿಪುರದ ಎಸ್‌ಆರ್‌ಟಿ, ತಾಳವಾಡಿಯ ಡಿವೈನ್ ಕಾನ್ವೆಂಟ್‌ಗಳಿಗೆ ಕಳುಹಿಸುತ್ತಿದ್ದಾರೆ. ವಿದ್ಯಾರ್ಥಿನಿಲಯಗಳಲ್ಲಿ ಉಳಿಯುವ ಕಾಲೇಜು ಹಂತದ ವಿದ್ಯಾರ್ಥಿಗಳಿಗೆ ಆಹಾರ (ತಂಗಳು ಹಾಗೂ ಪೌಷ್ಟಿಕವಲ್ಲದ ಆಹಾರ ನೀಡುವುದು) ಮತ್ತು ಇತರೆ ಸೌಲಭ್ಯಗಳ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮಕ್ಕಳು ಋತುಮಾನ ಮತ್ತು ರಜೆ ಅವಧಿಯಲ್ಲಿ ಕೆಲಸ ಮಾಡಲು ಹೊರಗೆ ಹೋಗುವುದರಿಂದ, ಆ ಕೆಲಸಗಳಿಂದ ಬರುವ ಹಣಕ್ಕೆ ಆಕರ್ಷಿತರಾಗಿ ಕೆಲವರು ಶಾಲೆ ಬಿಡುತ್ತಾರೆ. ಮಕ್ಕಳಿಗೆ ಮಾರ್ಗದರ್ಶನದ ಕೊರತೆ ಇದ್ದು, ಮಕ್ಕಳನ್ನು ಬಿಟ್ಟು ತಂದೆ ತಾಯಿಯರು ವಲಸೆ ಹೋಗುವುದರಿಂದ ಮಕ್ಕಳ ಓದಿನ ಮೇಲೆ ಗಂಭೀರ ಪರಿಣಾಮ ಬೀರುತ್ತದೆ.

**ಸರ್ಕಾರಿ ಪ್ರೌಢ ಶಾಲೆ, ಕೋಳಪಾಳ್ಯ :** ಕೋಳಪಾಳ್ಯ ಗ್ರಾಮದಲ್ಲಿ ೨೦೦೫-೦೬ನೇ ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲೆ ಆರಂಭಗೊಂಡಿದ್ದು, ೨೦೧೧-೧೨ನೇ ಸಾಲಿನಲ್ಲಿ ಒಟ್ಟು ೨೧೧ (ಗಂ-೧೧೫, ಹೆ-೯೬) ಮಕ್ಕಳು ದಾಖಲಾಗಿದ್ದು, ೬ ಜನ ಶಿಕ್ಷಕರಿದ್ದಾರೆ. ಈ ಶಾಲೆಯಲ್ಲಿ ಹೆಚ್ಚು ಲಂಬಾಣಿ ಸಮುದಾಯದ ಮಕ್ಕಳು ದಾಖಲಾಗುತ್ತಿದ್ದು, ಕೆಲವು ಗಿರಿಜನ, ಅಲ್ಪ ಸಂಖ್ಯಾತ ಹಾಗೂ ಇತರೇ ಸಮುದಾಯದ ಮಕ್ಕಳು ದಾಖಲಾಗಿದ್ದಾರೆ. ಶಾಲಾ ಶಿಕ್ಷಕರ ಅಭಿಪ್ರಾಯದಂತೆ ಲಂಬಾಣಿ, ಸೋಲಿಗ ಮತ್ತು ಅಲ್ಪ ಸಂಖ್ಯಾತ ಸಮುದಾಯದ ಮಕ್ಕಳಿಗೆ ಭಾಷಾ ಸಮಸ್ಯೆ ಇದೆ. ಲಂಬಾಣಿ ಮಕ್ಕಳಂತೂ ಮನೆ ಮತ್ತು ಸ್ನೇಹಿತರಿರುವಾಗ ಬಂಜಾರಿ ಭಾಷೆಯನ್ನೇ ಮಾತನಾಡುತ್ತಿದ್ದು, ಶಾಲೆಯಲ್ಲಿ ಶಿಕ್ಷಕರಿರುವಾಗ ಮಾತ್ರ ಕನ್ನಡ ಮಾತನಾಡುತ್ತಾರೆ. ಆದರೆ ಶಾಲೆಯಲ್ಲಿ ಕಲಿಯುವ ಭಾಷೆ ಕನ್ನಡ ಆಗಿದ್ದು, ಲಂಬಾಣಿ ಭಾಷೆ ಮಾತನಾಡುವುದರಿಂದ ಮಕ್ಕಳು ಕಲಿಕೆಯಲ್ಲಿ ಭಾಷಾ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಲಂಬಾಣಿ ಸಮುದಾಯದ ಮಕ್ಕಳು ಮನೆಯಲ್ಲಿ ಆರ್ಥಿಕ ಸಮಸ್ಯೆಗಳ ಕಾರಣದಿಂದ ಅರ್ಧಕ್ಕೆ ಶಾಲೆ ಬಿಡುವುದು ಅಥವಾ ಉತ್ತೀರ್ಣರಾದರೂ ಶಿಕ್ಷಣ ಮುಂದುವರಿಸದಿರುವುದು ಕಂಡು ಬರುತ್ತದೆ. ಅಲ್ಲದೆ ೮-೯ನೇ ತರಗತಿಗಳಲ್ಲಿ ಇರುವ ಹೆಣ್ಣು ಮಕ್ಕಳಿಗೆ ಮದುವೆ ಮಾಡುತ್ತಿದ್ದು, ಹೆಣ್ಣು ಮಕ್ಕಳು ಶಿಕ್ಷಣ ಮುಂದುವರಿಸಲು ಸಾಧ್ಯವಾಗುತ್ತಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕೆಲವು ಪೋಷಕರು ಮಕ್ಕಳನ್ನು ಸಂಬಂಧಿಕರ ಮನೆಯಲ್ಲಿ ಬಿಟ್ಟು ಕೆಲಸಕ್ಕಾಗಿ ವಲಸೆ ಹೋಗುತ್ತಿದ್ದು, ಮಕ್ಕಳು ಹಲವು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಈ ಸಮಸ್ಯೆಗಳು ಮಕ್ಕಳ ಕಲಿಕೆಯ ಮೇಲೆ ಪ್ರಭಾವ ಬೀರುತ್ತಿರುವುದಾಗಿ ತಿಳಿಸಿದ್ದಾರೆ.

ನಮ್ಮ ಶಾಲೆಗೆ ದಾಖಲಾಗುವ ಸೋಲಿಗ ಸಮುದಾಯದ ಮಕ್ಕಳಿಗೆ ೧-೨ನೇ ತರಗತಿ ಹಂತದ ಕಲಿಕಾ ಸಮಾರ್ಥ್ಯಗಳು ಬರುವುದಿಲ್ಲ. ಬೇರೆ ಕಡೆ ೮-೯ನೇ ತರಗತಿ ಫೇಲಾಗಿ ಇಲ್ಲಿಗೆ ಬಂದು ದಾಖಲಾಗುತ್ತಾರೆ. ಮನೆಯಲ್ಲಿ ಮಕ್ಕಳ ಕಲಿಕೆ ಕಡೆ ಗಮನ ಕೊಡುವುದಿಲ್ಲ, ಶಾಲೆಗೆ ಹೆಚ್ಚು ಗೈರು ಹಾಜರಿಯಾಗುತ್ತಾರೆ. ಸೋಲಿಗ ಮಕ್ಕಳು ಹೆಚ್ಚು ಮಾತನಾಡುವುದಿಲ್ಲ, ಹಿಂಜರಿಕೆಯ ಸ್ವಾಭಾವ ಜಾಸ್ತಿಯಿದೆ. ಆಟೋಟಗಳಲ್ಲಿ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದು ಕಡಿಮೆ ಇದೆ. ಸೋಲಿಗ ಮತ್ತು ಲಂಬಾಣಿ ಸಮುದಾಯದ ಮಕ್ಕಳು ಬೆಳೆ ಕಟಾವು (ಸುಗ್ಗಿ) ಸಂದರ್ಭದಲ್ಲಿ ಮುಸುಕಿನ ಜೋಳದ ತೆನೆ ಮುರಿಯಲು ಹಾಗೂ ಕಿರು ಅರಣ್ಯ ಉತ್ಪನ್ನಗಳ ಸಂಗ್ರಹ ಮಾಡಲು ಹೋಗುವುದರಿಂದ ಶಾಲೆಗೆ ಹೆಚ್ಚು ಗೈರುಹಾಜರಿಯಾಗುತ್ತಾರೆ. ಪೋಷಕರು ಮಕ್ಕಳ ಕಲಿಕೆ ಬಗ್ಗೆ ಕಾಳಜಿ ವಹಿಸಿ, ಮಾರ್ಗದರ್ಶನ ಮಾಡುವುದು ಬಹಳ ಕಡಿಮೆ ಇರುವುದಾಗಿ ತಿಳಿಸುತ್ತಾರೆ. ಅಲ್ಪ ಸಂಖ್ಯಾತ ಸಮುದಾಯದ ಮಕ್ಕಳ ಮನೆಯಲ್ಲೂ ಕೂಡ ಅವರ ಮಾತೃಭಾಷೆ ಉರ್ದು ಮಾತನಾಡುತ್ತಿದ್ದು, ಶಾಲೆಯಲ್ಲಿ ಕನ್ನಡ ಭಾಷೆ ಕಲಿಯುವಲ್ಲಿ ಸಮಸ್ಯೆಯಾಗಿದೆ. ಈ ಸಮುದಾಯದಲ್ಲೂ ಮಕ್ಕಳ ಶಿಕ್ಷಣದ ಮಟ್ಟ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಸೀಮಿತವಾಗಿದೆ. ಒಟ್ಟಾರೆ ಪ್ರಾಥಮಿಕ ಶಿಕ್ಷಣ ಮುಗಿಸಿ ಬರುವ ಬಹುತೇಕ ಮಕ್ಕಳಿಗೆ ಮೂಲ

ಕಲಿಕೆಯ ಸಮಸ್ಯೆಗಳಿರುವ ಕಾರಣ ಮೂಲ ಕಲಿಕೆಗೆ ಹೆಚ್ಚು ಒತ್ತು ನೀಡಬೇಕಾಗಿದ್ದು, ಪ್ರೌಢಶಾಲಾ ಹಂತದ ಕಲಿಕೆಗಳನ್ನು ಕಲಿಸುವಲ್ಲಿ ಸಮಸ್ಯೆಗಳಾಗುತ್ತಿದೆ ಎಂಬುದಾಗಿ ಶಿಕ್ಷಕರು ತಿಳಿಸಿರುತ್ತಾರೆ.

**ಮೊರಾರ್ಜಿ ದೇಸಾಯಿ ವಸತಿ ಶಾಲೆ :** ಜೂನ್ ೨೦೧೧ ರವರೆಗೂ ಚಾಮರಾಜನಗರ ಟೌನಿನ ಬಾಡಿಗೆ ಕಟ್ಟಡದಲ್ಲಿ ನಡೆಯುತಿದ್ದ ಮೊರಾರ್ಜಿ ದೇಸಾಯಿ ವಸತಿ ಶಾಲೆಯು ಜುಲೈ ೨೦೧೧ ರಿಂದ ಪುಣಜನೂರು ಆಶ್ರಮ ಶಾಲಾ ಕಟ್ಟಡಕ್ಕೆ ಸ್ಥಳಾಂತರಗೊಂಡಿದೆ. ಪುಣಜನೂರು ಆಶ್ರಮ ಶಾಲೆಯು ಹೊಸ ಕಟ್ಟಡವಾಗಿದ್ದು, ಹೆಚ್ಚುವರಿ ಕೊಠಡಿಗಳು ಹಾಗೂ ಮೂಲಭೂತ ಸೌಲಭ್ಯಗಳನ್ನು ಹೊಂದಿದ್ದು, ಕಡಿಮೆ ಮಕ್ಕಳಿರುವ ಕಾರಣ ಇಲ್ಲಿಗೆ ಸ್ಥಳಾಂತರ ಮಾಡಲಾಗಿದೆ. ಈ ಶಾಲೆಯು ೬ ರಿಂದ ೧೦ನೇ ತರಗತಿಯವರೆಗೆ ಇದ್ದು, ಜಿಲ್ಲೆಯ ನಾಲ್ಕು ತಾಲ್ಲೂಕುಗಳಿಂದಲೂ ಮಕ್ಕಳು ದಾಖಲಾಗುತ್ತಾರೆ. ಶಾಲೆಯಲ್ಲಿ ಒಟ್ಟು ೧೩೮ ಮಕ್ಕಳು (ಗಂಡು–೯೬, ಹೆಣ್ಣು–೪೨) ದಾಖಲಾಗಿದ್ದಾರೆ. ಇವರಲ್ಲಿ ೬ ರಿಂದ ೭ನೇ ತರಗತಿಗೆ ೫೯ ಮಕ್ಕಳು ದಾಖಲಾಗಿದ್ದಾರೆ. ಇವರಲ್ಲಿ ಗಂಡು ಮಕ್ಕಳ ಸಂಖ್ಯೆ ೫೦ ಹಾಗೂ ಹೆಣ್ಣು ಮಕ್ಕಳ ಸಂಖ್ಯೆ ಕೇವಲ ೦೯ ಇದ್ದು, ಲಿಂಗ ಪ್ರಮಾಣದಲ್ಲಿ ತುಂಬಾ ವ್ಯತ್ಯಾಸವಿರುವುದನ್ನು ಕಾಣಬಹುದು. ೮ ರಿಂದ ೧೦ನೇ ತರಗತಿಗೆ ೭೯ ಮಕ್ಕಳು ದಾಖಲಾಗಿದ್ದು, ಗಂಡು ಮಕ್ಕಳ ಸಂಖ್ಯೆ ೪೬ ಹಾಗೂ ಹೆಣ್ಣು ಮಕ್ಕಳ ಸಂಖ್ಯೆ ೩೩ ಇದೆ.

ಶಿಕ್ಷಕರು ಅಭಿಪ್ರಾಯದಲ್ಲಿ ಈ ಶಾಲೆಗೆ ದಾಖಲಾಗುವ ಲಂಬಾಣಿ ಮಕ್ಕಳು ಕಲಿಕೆಯಲ್ಲಿ ಆಸಕ್ತಿ ವಹಿಸುತ್ತಾರೆ, ರಾತ್ರಿ ಉಳಿಯುತ್ತಾರೆ. ಆದರೆ ಸೋಲಿಗ ಮಕ್ಕಳು ಕಲಿಕೆಯಲ್ಲೂ ಆಸಕ್ತಿ ತೋರುವುದಿಲ್ಲ, ಶಾಲೆಗೂ ಸರಿಯಾಗಿ ಹಾಜರಾಗುವುದಿಲ್ಲ. ಬಿತ್ತನೆ, ಸುಗ್ಗಿ ಮತ್ತು ಕಿರು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವ ಸಂದರ್ಭದಲ್ಲಿ ಅವರನ್ನು ಹಿಡಿಯುವುದೇ ಕಷ್ಟ. ಸೋಲಿಗ ಸಮುದಾಯದ ಗಂಡು ಮತ್ತು ಹೆಣ್ಣು ಮಕ್ಕಳು ಪ್ರೌಢ ಹಂತಕ್ಕೆ ಬರುತ್ತಿದ್ದಂತೆಯೇ ಸಂಗಾತಿಗಳಾಗಲು ಇಷ್ಟಪಡುತ್ತಾರೆ. ಇದಕ್ಕೆ ಪೋಷಕರೂ ಒಪ್ಪಿಕೊಳ್ಳುತ್ತಾರೆ. ಈ ಶಾಲೆಗಳಲ್ಲಿರುವ ಬಹುತೇಕ ಶಿಕ್ಷಕರು ಹೊರ ವಲಯ ಸಂಪನ್ಮೂಲ ಶಿಕ್ಷಕರಾಗಿದ್ದು, ಉದ್ಯೋಗದ ಅಭದ್ರತೆ ಮತ್ತು ವೇತನದ ಸಮಸ್ಯೆಗಳನ್ನು ಎದುರಿಸುತ್ತಿರುವುದಾಗಿ ತಿಳಿಸಿದ್ದಾರೆ.

## ಮುಚ್ಚುತ್ತಿರುವ ಶಾಲೆಗಳು–ಶಾಲೆಯಿಂದ ಹೊರಗುಳಿಯುತ್ತಿರುವ ಮಕ್ಕಳು

**ಕಿರಿಯ ಪ್ರಾಥಮಿಕ ಶಾಲೆ, ಹೊಸಪೋಡು :** ಗಿರಿಜನ ಕಾಲೋನಿ ಹೊಸಪೋಡಿನ ಮಕ್ಕಳು ಶಿಕ್ಷಣ ಪಡೆಯಲು ೨ ಕಿ.ಮೀ ದೂರದಲ್ಲಿರುವ ಪುಣಜನೂರಿನ ಆಶ್ರಮ ಶಾಲೆಗೆ ಹೋಗುತ್ತಿದ್ದನ್ನು ಮನಗಂಡ ಸಾರ್ವಜನಿಕ ಶಿಕ್ಷಣ ಇಲಾಖೆ ೨೦೧೦–೧೧ನೇ ಸಾಲಿನಲ್ಲಿ ಕೋಳಿಪಾಳ್ಯ ಕ್ಲಸ್ಟರ್‌ನ ಹೊಸಪೋಡಿನಲ್ಲಿ ಹೊಸದಾಗಿ ಕಿರಿಯ ಪ್ರಾಥಮಿಕ ಶಾಲೆಯನ್ನು ತೆರೆಯಿತು. ಆದರೆ ಶಾಲೆ ನಿರಂತರವಾಗಿ ನಡೆಯಲಿಲ್ಲ. ಆಶ್ರಮ ಶಾಲೆಗಳಲ್ಲಿ ಸಿಗುವ ಸೌಲಭ್ಯಗಳು ಸೌಲಭ್ಯಗಳು ಈ ಪ್ರಾಥಮಿಕ ಶಾಲೆಯಲ್ಲಿ ಸಿಗುದಿರುವ ಕಾರಣ ಮಕ್ಕಳು ಈ ಶಾಲೆಗೆ ಹೋಗುತ್ತಿರಲಿಲ್ಲ, ಶಿಕ್ಷಕರು ಸರಿಯಾಗಿ ಹಾಜರಾಗಿ ಬೋಧನೆ ಮಾಡುತ್ತಿರಲಿಲ್ಲ. ಹಾಗಾಗಿ ೨೦೧೧–೧೨ ನೇ ಸಾಲಿನಲ್ಲಿ ಜುಲೈ ತಿಂಗಳ ಮಧ್ಯಭಾಗದಲ್ಲಿ ಗ್ರಾಮ

ಸಭೆಯನ್ನು ಮಾಡಿ, ಗ್ರಾಮಕ್ಕೆ ಶಾಲೆಯ ಅವಶ್ಯಕತೆ ಇಲ್ಲವೆಂದು ಪರಿಗಣಿಸಿ ಮುಚ್ಚಲಾಗಿದೆ. ಆದರೆ ಈ ಗ್ರಾಮದ ಮಕ್ಕಳೆಲ್ಲಾ ಯಥಾಸ್ಥಿತಿ ಪುಣಜನೂರಿನ ಗಿರಿಜನ ಆಶ್ರಮ ಶಾಲೆಗೆ ಹೋಗುತ್ತಿದ್ದರೂ ವಿವಿಧ ತರಗತಿಯ ೧೦-೧೨ ಮಕ್ಕಳು ಶಾಲೆ ಬಿಟ್ಟಿದ್ದಾರೆ. ೫ನೇ ತರಗತಿ ನಂತರ ಶಾಲಾ ಶಿಕ್ಷಣವನ್ನೇ ಮುಂದುವರಿಸದ ಕೆಲವು ಮಕ್ಕಳಿದ್ದಾರೆ.

**ಕಿರಿಯ ಪ್ರಾಥಮಿಕ ಶಾಲೆ, ಚಿಕ್ಕಮೂಡಳ್ಳಿ :** ಚಿಕ್ಕಮೂಡಳ್ಳಿಯ ಕಿರಿಯ ಪ್ರಾಥಮಿಕ ಶಾಲೆಯು ಉತ್ತಮ ಕಟ್ಟಡದ ವ್ಯವಸ್ಥೆಯೊಂದಿಗೆ ಆರಂಭಗೊಂಡರೂ ಶಾಲೆಗೆ ದಾಖಲಾಗುವ ಮಕ್ಕಳ ಸಂಖ್ಯೆ ಬಹಳ ಕಡಿಮೆ ಇದ್ದ ಕಾರಣ ೨೦೦೭-೦೮ನೇ ಸಾಲಿನಿಂದ ಶಾಲೆಯನ್ನು ಮುಚ್ಚಲಾಗಿದೆ.

**ಮಾಧ್ಯಮಿಕ ಶಾಲೆ, ಬೇಡಗುಳಿ :** ಅಡವಿಯ ನಡುವೆ ಇರುವ ಬೇಡಗುಳಿ ಪ್ರದೇಶದ ೪-೫ ಗ್ರಾಮಗಳ ಗಿರಿಜನ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯು ಮಾಧ್ಯಮಿಕ (೫-೬) ಶಾಲೆಯನ್ನು ತೆರೆಯಲಾಗಿತ್ತು. ಆದರೆ ಮಾಧ್ಯಮಿಕ ಶಾಲೆಗೆ ಸಾಕಷ್ಟು ಮಕ್ಕಳು ಲಭ್ಯವಿಲ್ಲವೆಂದು ಹೇಳಿ ೨೦೦೯-೧೦ನೇ ಸಾಲಿನಲ್ಲಿ ಮುಚ್ಚಲಾಗಿದೆ. ಅದಕ್ಕೆ ಎರಡು ರೀತಿಯ ಕಾರಣಗಳು ಇವೆ. ಮೊದಲನೆಯದಾಗಿ ಆಶ್ರಮ ಶಾಲೆ ಹಾಗೂ ಬುಡಕಟ್ಟು ಸಮುದಾಯದ ಕಾಲೋನಿಗಳ ಪಕ್ಕದಲ್ಲೇ ಇರುವ ಮಾಧ್ಯಮಿಕ ಶಾಲೆಗೆ ಸಾಕಷ್ಟು ಮಕ್ಕಳು ದಾಖಲಾಗುತ್ತಿಲ್ಲ ಎಂಬ ಕಾರಣ ನಿಜವಾದರೂ ಈ ಪ್ರದೇಶದಲ್ಲಿ ಮಾಧ್ಯಮಿಕ (೬-೭) ತರಗತಿಗೆ ದಾಖಲಾಗುವ ಸಾಕಾಗುವಷ್ಟು ಮಕ್ಕಳು ಲಭ್ಯವಿದ್ದಾರೆ. ವಾಸ್ತವದಲ್ಲಿ ಶಾಲೆ ಬಿಟ್ಟ ಹಾಗೂ ಶಾಲೆಗೆ ದಾಖಲಾಗದ ಸುಮಾರು ೨೦-೩೦ ಮಕ್ಕಳಿದ್ದು, ಅವರೆಲ್ಲ ಕೂಲಿ ಮಾಡುತ್ತಿದ್ದಾರೆ. ೧ ರಿಂದ ೫ನೇ ತಗರತಿ ಮುಗಿಸಿದ ಆಶ್ರಮ ಶಾಲೆಯ ಕೆಲವು ಮಕ್ಕಳನ್ನು ಆಶ್ರಮ ಶಾಲಾ ಶಿಕ್ಷಕರೇ ೬ನೇ ತರಗತಿಗೆ ಚಾಮರಾಜನಗರದ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲ ಅಥವಾ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ದಾಖಲು ಮಾಡುತ್ತಾರೆ. ಹೀಗೆ ದಾಖಲಾಗುವ ಬಹುತೇಕ ಮಕ್ಕಳು ಒಂದೆರಡು ತಿಂಗಳಲ್ಲೇ ಶಾಲೆ ಬಿಟ್ಟು ಊರು ಸೇರುತ್ತಾರೆ. ಸ್ವಲ್ಪ ದಿನ ಕಾಡು ಮೇಡು ಅಲೆಯುತ್ತಾರೆ. ನಂತರ ಕಾಫಿ ಎಸ್ಟೇಟ್‌ಗೆ ದುಡಿಯಲು ಹೋಗುತ್ತಾರೆ. ಎರಡನೆಯದಾಗಿ ಮಾಧ್ಯಮಿಕ ಶಾಲೆಯು ಜಿಲ್ಲಾ ಕೇಂದ್ರಕ್ಕೆ ೫೦ ಕಿ.ಮೀ ದೂರದಲ್ಲಿದ್ದು, ಶಿಕ್ಷಕರಿಗೆ ಪ್ರತಿ ದಿನ ಓಡಾಡಲು ಅನಾನುಕೂಲವಿದ್ದು, ವಾರದಲ್ಲಿ ಎರಡು ದಿನಗಳು ಹೋಗಿಬರಬಹುದಾಗಿದೆ (ಒಂದು ಖಾಸಗಿ ಬಸ್ ಸಂಜೆ ೫ಕ್ಕೆ ಬೇಡುಗುಳಿ ತಲುಪಿ, ಬೆಳಗ್ಗೆ ೭ ಹೊರಡುತ್ತದೆ. ಹಾಗಾಗಿ ರಾತ್ರಿ ಹೋಗಿ ಬೆಳಗ್ಗೆ ಬರಲು ಆಗುವುದಿಲ್ಲ. ಹಾಗಾಗಿ ಅವರು ಊರು ತಲುಪಬೇಕಾದರೆ ಮತ್ತೇ ಮಾರನೇ ದಿನವೇ). ಅಲ್ಲದೆ ಶಿಕ್ಷಕರಿಗೆ ಶಾಲಾ ಕೊಠಡಿಗಳೇ ವಸತಿಯಾಗಿದ್ದು, ಊಟ-ತಿಂಡಿಯನ್ನು ಅವರೇ ಸಿದ್ಧಪಡಿಸಿಕೊಳ್ಳಬೇಕಾಗಿತ್ತು. ಕೊರೆಯುವ ಚಳಿ, ಹೆಚ್ಚಿನ ಮಳೆ ಪ್ರಮಾಣ ಹೆಚ್ಚಾಗಿರುತ್ತದೆ. ಹಾಗಾಗಿ ಲಭ್ಯವಿದ್ದ ಇಬ್ಬರು ಶಿಕ್ಷಕರಲ್ಲಿ ವಾರದಲ್ಲಿ ಮೂರು ದಿನ ಒಬ್ಬೊಬ್ಬರು ಇರುವ ಹೊಂದಾಣಿಕೆ ಇತ್ತು. ಇದರಿಂದ ಮಕ್ಕಳಿಗೆ ಸರಿಯಾದ ಬೋಧನೆ ಸಿಗದ ಕಾರಣ ಮಕ್ಕಳು ಶಾಲೆಗೆ ದಾಖಲಾಗಲು ಆಸಕ್ತಿ ತೋರಲಿಲ್ಲ ಎಂಬುದಾಗಿ ಗ್ರಾಮಸ್ಥರು ದೂರುತ್ತಾರೆ. ಶಿಕ್ಷಕರಿಗಿದ್ದ ಅನಾನುಕೂಲ

ಸ್ಥಿತಿ ಹಾಗೂ ಶಿಕ್ಷಕರ ವರ್ಗಾವಣೆ ಪ್ರಭಾವ ಕೂಡ ಈ ಪ್ರದೇಶದಲ್ಲಿ ಮಾಧ್ಯಮಿಕ ಶಾಲೆ ಮುಚ್ಚಲು ಕಾರಣವಾಗಿದೆ.

**ಕಿರಿಯ ಪ್ರಾಥಮಿಕ ಶಾಲೆ ಕಾಡಿಗೆರೆ ಮತ್ತು ಎತ್ತೇಗೌಡನದೊಡ್ಡಿ :** ಗಿರಿಜನ ಮಕ್ಕಳಿರುವ ಕಾಡಿಗೆರೆ ಮತ್ತು ಎತ್ತೇಗೌಡನದೊಡ್ಡಿ ಪ್ರದೇಶಗಳ ಶಾಲೆಗಳಲ್ಲಿ ದಾಖಲಾಗುವ ಮಕ್ಕಳ ಸಂಖ್ಯೆ ಕಡಿಮೆ (೮-೧೦) ಇದ್ದು ಮುಚ್ಚುವ ಹಂತದಲ್ಲಿವೆ. ಈ ಪಂಚಾಯಿತಿ ವ್ಯಾಪ್ತಿಯಲ್ಲಿ ಗಿರಿಜನ ಕಾಲೋನಿಯ ಮಕ್ಕಳ ಶಿಕ್ಷಣ ಬಹುತೇಕ ಕಿರಿಯ ಪ್ರಾಥಮಿಕ ಶಿಕ್ಷಣಕ್ಕೆ ಸೀಮಿತವಾಗುತ್ತಿದ್ದು, ಹೆಚ್ಚಿನ ಮಕ್ಕಳು ಶಾಲೆಯಿಂದ ಹೊರಗುಳಿಯುತ್ತಿದ್ದಾರೆ. ಸ್ವಲ್ಪ ಪ್ರಮಾಣದಲ್ಲಿ ಹಿರಿಯ ಪ್ರಾಥಮಿಕ ಶಿಕ್ಷಣವನ್ನು ಹಾಗೂ ಬಹಳ ಕಡಿಮೆ ಮಕ್ಕಳು ಪ್ರೌಢಶಾಲಾ ಶಿಕ್ಷಣ ಪಡೆಯಲು ದಾಖಲಾದರೂ ಅರ್ಧದಲ್ಲಿ ಶಾಲೆ ಬಿಡುವುದು ಹೆಚ್ಚಾಗಿದೆ.

ಬುಡಕಟ್ಟು ಸಮುದಾಯ ಸೋಲಿಗರೇ ಹೆಚ್ಚಿನ ಸಂಖ್ಯೆಯಲ್ಲಿ ಇರುವ ಬಾನವಾಡಿ ಗ್ರಾಮದಲ್ಲಿ ನಾಲ್ವರು ಹೆಣ್ಣು ಮಕ್ಕಳು ಮಾತ್ರ ೨೦೧೧-೧೨ನೇ ಸಾಲಿನಲ್ಲಿ ಕಾಲೇಜು ಶಿಕ್ಷಣ ಪಡೆಯುತ್ತಿದ್ದು, ಈ ಸಮುದಾಯದ ಮೊದಲ ತಲೆಮಾರಿನವರಾಗಿದ್ದಾರೆ. ಈ ಮೊದಲು ಬಾನವಾಡಿಯ ಒಬ್ಬ ಯುವಕ ಮತ್ತು ಗೋಡೆಮಡುವಿನ ಒಬ್ಬ ಯುವತಿ ಪದವಿಪೂರ್ವ ಶಿಕ್ಷಣದಲ್ಲಿ ಅನುತ್ತೀರ್ಣರಾಗಿ ಶಾಲೆ ಬಿಟ್ಟಿದ್ದಾರೆ. ಶಾಲೆಯಲ್ಲಿ ಮಕ್ಕಳ ಆಸಕ್ತಿಗಳಿಗೆ ಅನುಗುಣವಾದ ಬೋಧನೆ ಇಲ್ಲದಿರುವುದು, ಮಕ್ಕಳ ಕಲಿಕಾ ಸಮಸ್ಯೆಗಳು ಕೂಡ ಗಿರಿಜನ ಮಕ್ಕಳು ಶಾಲೆ ಬಿಡಲು ಕಾರಣವಾಗಿವೆ. ಗಿರಿಜನ ಮಕ್ಕಳು ತಮ್ಮ ಗ್ರಾಮದ ಯುವ ಜನರ ಜೊತೆ ವಯಸ್ಸಿನ ಅಂತರವಿಲ್ಲದೆ ಮುಕ್ತವಾಗಿ ಬೆರೆಯುವುದರಿಂದ ಅವರಿಗೆ ಶಾಲೆಯ ಕಲಿಕೆಗಿಂತ, ಹೊರಗಿನ ಕಲಿಕೆ ಮತ್ತು ಅನುಭವಗಳಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಾರೆ. ಅಲ್ಲದೆ ಮಕ್ಕಳ'ಲ್ಲಿ ಹಿಂಜರಿಕೆ ಮನೋಭಾವ, ಸಂಕೋಚ, ಅತ್ಮವಿಶ್ವಾಸದ ಕೊರತೆಯಿದ್ದು, ಹೊರಗಿನವರೊಂದಿಗೆ ಮಾತನಾಡಲು ಹಿಂಜರಿಯುತ್ತಾ ಮನೆಯೊಳಗೆ ಸೇರಿಕೊಳ್ಳುತ್ತಾರೆ ಅಥವಾ ಹೊರಗೆ ಹೊರಟು ಹೋಗುತ್ತಾರೆ. ಪೋಷಕರು ಮಕ್ಕಳನ್ನು ವ್ಯವಸಾಯದ ಕೂಲಿ ಕೆಲಸಗಳಲ್ಲಿ, ಪಶುಪಾಲನೆ ಹಾಗೂ ಕಾಡಿನ ಉಪ ಉತ್ಪನ್ನಗಳನ್ನು ಸಂಗ್ರಹಿಸುವ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದು ಕಂಡು ಬರುತ್ತದೆ. ಜೊತೆಗೆ ತಂದೆ ತಾಯಿಗಳ ಅಕಾಲಿಕ ಮರಣ, ಮಧ್ಯಪಾನ, ಧೂಮಪಾನದ ಅಭ್ಯಾಸಗಳು ಹಾಗೂ ಈಗಾಗಲೇ ಶಾಲೆ ಬಿಟ್ಟ ಹಿರಿಯ ಸಹ ಪಾಠಿಗಳ ಒಡನಾಟಗಳ ಕಾರಣಗಳಿಂದ ಮಕ್ಕಳು ಶಾಲೆ ಬಿಡುವುದು ಹೆಚ್ಚಾಗಿ ಕಂಡು ಬರುತ್ತದೆ. ಕ್ಷೇತ್ರ ಭೇಟಿಗಳಲ್ಲಿ ಅವಲೋಕಿಸಿದಂತೆ ೨೦೧೧-೧೨ನೇ ಸಾಲಿನಲ್ಲಿ ಹೊಸಪೋಡು, ಪುಣಜನೂರು, ಬಾನವಾಡಿ, ರಂಗಸಂದ್ರ ಗಿರಿಜನ ಕಾಲೋನಿಗಳಲ್ಲಿ ಸುಮಾರು ೨೦ ರಿಂದ ೩೦ ಮಕ್ಕಳು ಪ್ರಾಥಮಿಕ ಹಂತದಲ್ಲಿ ಶಾಲೆ ಬಿಟ್ಟಿದ್ದು, ಬೇಡಗುಳಿ ಪ್ರದೇಶದಲ್ಲಿ ಹೆಚ್ಚಿನ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಮೊಣಕೈಪೋಡಿನಲ್ಲಿ ಶಾಲೆ ಬಿಟ್ಟ ಮಕ್ಕಳಿಗಾಗಿ ಚಿಣ್ಣರ ಅಂಗಳ ಕೇಂದ್ರವನ್ನು ಗಿರಿಜನ ಶಿಕ್ಷಣ ಮತ್ತು ಗ್ರಾಮೀಣಾ ಅಭಿವೃದ್ಧಿ ಸಂಸ್ಥೆ ನಡೆಸುತ್ತಿದೆ. ೨೦೧೧-೧೨ನೇ ಸಾಲಿನಲ್ಲಿ ಬಾನವಾಡಿಯ ಕುಂಬೇಗೌಡರ ಮೊಮ್ಮಗಳಾದ ೬ ವಯಸ್ಸಿನ ಸೌಮ್ಯಶ್ರೀ ಪಕ್ಕದ ಗ್ರಾಮದ

ರೈತರೊಬ್ಬರ ಮನೆಯಲ್ಲಿ ಜೀತಕ್ಕೆ ಇರುವ ವಿಷಯವನ್ನು ವಿವಿಧ ಪತ್ರಿಕಾ ಪ್ರಕಟಣೆಗಳು ಮತ್ತು ದೃಶ್ಯ ಮಾಧ್ಯಮಗಳಲ್ಲಿ ಬಿತ್ತರಗೊಂಡ ನಂತರ ಸೌಮ್ಯಶ್ರೀಯನ್ನು ಜೀತದಿಂದ ಮುಕ್ತಿಗೊಳಿಸಲಾಗಿದೆ. ನಂತರ ಸೌಮ್ಯಶ್ರೀಯನ್ನು ಕೋಳಿಪಾಳ್ಯ ಆಶ್ರಮ ಶಾಲೆಯಲ್ಲಿ ೨ನೇ ತರಗತಿಗೆ ದಾಖಲಿಸಲಾಗಿದೆ.

ಕ್ಷೇತ್ರಾಧ್ಯಯನದ ಸಂದರ್ಭದಲ್ಲಿ ಅಂಗನವಾಡಿ, ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ಭೇಟಿ ನೀಡಲಾಗಿದ್ದು, ಶೈಕ್ಷಣಿಕ ವರ್ಷ ಅರ್ಧಭಾಗ ಕಳೆದರೂ ಕೆಲವು ಕಡೆ ಅಗತ್ಯ ಮಾಹಿತಿಗಳನ್ನು ಸರಿಯಾದ ಕ್ರಮದಲ್ಲಿ ಇಟ್ಟುಕೊಂಡಿಲ್ಲ. ಕ್ರೂಢೀಕೃತ ಮಾಹಿತಿಗಳನ್ನು ಸಿದ್ಧಪಡಿಸಿಕೊಳ್ಳದಿರುವುದು ಕಂಡು ಬಂತು. ಈ ಪ್ರದೇಶದಲ್ಲಿ ಸರ್ಕಾರಿ ಪ್ರೌಢ ಶಾಲೆ ಮತ್ತು ಮಾಧ್ಯಮಿಕ ಮತ್ತು ಪ್ರೌಢ ಹಂತದ ಮೊರಾರ್ಜಿ ದೇಸಾಯಿ ವಸತಿ ಶಾಲೆ ಆರಂಭವಾಗಿರುವುದು ಈ ಪ್ರದೇಶದ ಮಕ್ಕಳ ಶಿಕ್ಷಣದ ಮುಂದುವರಿಕೆಗೆ ಹೆಚ್ಚು ಅನುಕೂಲಕರವಾಗಿದೆ. ಆದರೆ ಈ ವ್ಯಾಪ್ತಿಯಲ್ಲಿ ಸ್ಥಳೀಯವಾಗಿ ಕಾಲೇಜು ಇಲ್ಲದಿರುವುದು ಹೆಚ್ಚಿನ ಶಿಕ್ಷಣ ಪಡೆಯಲು ಅದರಲ್ಲೂ ಹೆಣ್ಣು ಮಕ್ಕಳಿಗೆ ಹೆಚ್ಚಿನ ಸಮಸ್ಯೆಯಾಗಿದೆ. ಮಕ್ಕಳು ಕಾಲೇಜು ಶಿಕ್ಷಣ ಪಡೆಯಲು ಸುಮಾರು ೨೦ ರಿಂದ ೩೦ ಕಿ.ಮೀ ದೂರ ಪ್ರಯಾಣ ಮಾಡಬೇಕಿದೆ. ಬೇಡಗುಳಿ ಪ್ರದೇಶದ ಮಕ್ಕಳಿಗೆ ೪೦ ರಿಂದ ೫೦ ಕಿ.ಮೀ ದೂರದ ಹೋಗಿ ಕಲಿಯಬೇಕಿರುವುದರಿಂದ ಮಕ್ಕಳು ತಮ್ಮ ಮುಂದಿನ ಶಿಕ್ಷಣವನ್ನು ಮೊಟಕುಗೊಳಿಸುತ್ತಾರೆ.

## ವಿವಿಧ ಇಲಾಖೆಗಳ ನಡುವಿನ ಸಂಬಂಧ

ಈ ವಲಯದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಶಾಲೆಗಳಿದ್ದು, ಪರಸ್ಪರ ಹೊಂದಾಣಿಕೆ, ಸಮನ್ವಯ ಹಾಗೂ ಸಂವಹನದ ಸಮಸ್ಯೆಗಳಿವೆ. ಆದರೂ ಗುಚ್ಛ (ಕ್ಲಸ್ಟರ್) ಸಂಪನ್ಮೂಲ ವ್ಯಕ್ತಿ (ಸಿಆರ್‌ಪಿ) ಆಶ್ರಮ ಶಾಲೆಗಳಿಗೆ ಭೇಟಿ ನೀಡಿ ಶೈಕ್ಷಣಿಕ ಮಾಹಿತಿಗಳನ್ನು ಪಡೆಯುವ ಜೊತೆಗೆ ಶಿಕ್ಷಕರಿಗೆ ತರಬೇತಿಗಳಲ್ಲಿ ಭಾಗವಹಿಸಲು ಮಾಹಿತಿ ನೀಡುತ್ತಾರೆ. ಪುಣಜನೂರು ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಜನ ಪ್ರತಿನಿಧಿಗಳು ಶಾಲಾ ಕಾರ್ಯಕ್ರಮ, ಬಟ್ಟೆ, ಬೈಸಿಕಲ್ ವಿತರಣೆ ಹಾಗೂ ಕಟ್ಟಡಗಳ ಉದ್ಘಾಟನೆ ಸಂದರ್ಭಗಳಲ್ಲಿ ಭೇಟಿ ಕೊಡುತ್ತಾರೆ. ೨೦೦೬ ರ ಪಾರಂಪರಿಕ ಅರಣ್ಯ ಹಕ್ಕುಗಳ ಕಾಯಿದೆಯಡಿ ಜಿಲ್ಲಾಧಿಕಾರಿಗಳು, ಅರಣ್ಯ ಸಂರಕ್ಷಣಾಧಿಕಾರಿಗಳು, ಪರಿಶಿಷ್ಟವರ್ಗಗಳ ಕಲ್ಯಾಣಾಧಿಕಾರಿಗಳು ಹಾಗೂ ಜಿಲ್ಲೆಯ ಬುಡಕಟ್ಟು ಸಂಘಗಳು, ಬುಡಕಟ್ಟು ಕಾಲೋನಿಯ ಜನರ ನಡುವೆ ಭೂ ಒಡೆತನದ ಹಕ್ಕು ಪತ್ರಗಳನ್ನು ಪಡೆಯುವ ಭಾಗವಾಗಿ ಹೊಂದಾಣಿಕೆಯ ಕೆಲಸಗಳು ನಡೆಯುತ್ತಿವೆ. ಆದರೆ ಅರಣ್ಯ ಇಲಾಖೆಯಿಂದ ಮಕ್ಕಳಿಗೆ ಕಾಡು, ಪರಿಸರ, ಪ್ರಾಣಿ, ಪಕ್ಷಿಗಳು, ಕಾಡಿನ ಅನುಭವಗಳನ್ನು ಕುರಿತು ತಿಳಿಸುವಂತಹ ಪ್ರಯತ್ನಗಳನ್ನು ಅರಣ್ಯ ಇಲಾಖೆ ಕೂಡ ಮಾಡುತ್ತಿಲ್ಲ. ಶಿಕ್ಷಕರು ಕೂಡ ತಮ್ಮ ಮಕ್ಕಳಿಗೆ ಈ ಬಗ್ಗೆ ವಿಷಯಗಳನ್ನು ತಿಳಿಸುವಂತೆ ಆಹ್ವಾನ ನೀಡುವ ಪರಿಪಾಠವು ಇಲ್ಲ. ಶಾಲೆಗಳಿಗೆ ಭೇಟಿ ಮಾಡುವ ವೈದ್ಯಾಧಿಕಾರಿಗಳು ಮಕ್ಕಳಿಗೆ ಕೇವಲ ಆರೋಗ್ಯ ತಪಾಸಣೆ

ಮಾಡುತ್ತಿದ್ದು, ಸ್ವಚ್ಛತೆ, ಆರೋಗ್ಯ ಮತ್ತು ಪ್ರೌಢಾವಸ್ಥೆಯ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವ ಕೆಲಸಗಳನ್ನು ಮಾಡುತ್ತಿಲ್ಲ.

## ಸ್ಥಳೀಯ ಸಂಸ್ಥೆಗಳ ವಿವರ

ಪುಣಜನೂರು ಪಂಚಾಯಿತಿ ವ್ಯಾಪ್ತಿಯಲ್ಲಿ ಸಂಘ, ಸಂಸ್ಥೆಗಳು ಕೆಲಸ ಮಾಡುತ್ತಿವೆ. ಅವುಗಳೆಂದರೆ ದೊಡ್ಡಮೂಡಳ್ಳಿಯಲ್ಲಿರುವ 'ಚೇತನ ಹವ್ಯಾಸಿ ಬಳಗ'ದ ಕಸೂತಿ ಕೇಂದ್ರದಲ್ಲಿ ಪ್ರಸ್ತುತ ೨೦ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಸಿದ್ಧವಾದ ವಸ್ತುಗಳು ಬೆಂಗಳೂರು, ಮುಂಬೈ ಹಾಗೂ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಮಾರಾಟ ಆಗುತ್ತವೆ. ಶ್ರೀನಿವಾಸಪುರ ಕಾಲೋನಿಯಲ್ಲಿ 'ಕೀ ಸ್ಟೋನ್ ಫೌಂಡೇಶನ್' ಸಂಸ್ಥೆಯ ಬಯೋಡೈವರ್‌ಸಿಟಿ ಕನ್ಸರವೇಷನ್ ಸಂಪನ್ಮೂಲ ಕೇಂದ್ರವಿದ್ದು, ಸಾವಯವ ಕೃಷಿ ಮತ್ತು ಜೇನು ಸಾಕಾಣಿಕೆ ಕುರಿತು ತರಬೇತಿ ಮತ್ತು ನೆರವು ನೀಡುತ್ತಿದೆ. ಪುಣಜನೂರು ಗೇಟ್ ಬಳಿ 'ಮೈತ್ರಿ ಟ್ರಸ್ಟ್'ನ ಉಪ ಕೇಂದ್ರವಿದ್ದು, ಅಂಗವಿಕಲರ ಜೊತೆ ಕೆಲಸ ಮಾಡುತ್ತಿದೆ. ಗಿರಿಜನ ಪ್ರದೇಶಗಳಲ್ಲಿ ಕರುಣಾ ಟ್ರಸ್ಟನ ಸಂಚಾರಿ ಆರೋಗ್ಯ ಘಟಕ ಕೆಲಸ ನಿರ್ವಹಿಸುತ್ತಿದ್ದು, ಶ್ರೀನಿವಾಸಪುರ ಕಾಲೋನಿಯಲ್ಲಿ ಕೇಂದ್ರವನ್ನು ತೆರೆಯಲಾಗಿದೆ. ಮಹಿಳಾ ಸಮಾಖ್ಯಾ ವತಿಯಿಂದ ಶಿಕ್ಷಣ ಮತ್ತು ಆರೋಗ್ಯ ಕುರಿತು ಜಾಗೃತಿ ಮೂಡಿಸುವ ಕೆಲಸಗಳನ್ನು ಮಾಡುತ್ತಿದೆ. ಮೈರಾಡ ಸಂಸ್ಥೆಯು ಕಳೆದ ೧೦–೧೨ ವರ್ಷಗಳಿಂದ ವಿವಿಧ ಮಹಿಳಾ ಸ್ವ–ಸಹಾಯ ಸಂಘಗಳನ್ನು ಆರಂಭಿಸಿದ್ದು, ಲಂಬಾಣಿ ಸಮುದಾಯದಲ್ಲಿ ಉತ್ತಮವಾಗಿ ಕೆಲಸ ಮಾಡುತ್ತಿದೆ. ಈ ಸಂಘದ ಸದಸ್ಯರಿಗೆ ಉಳಿತಾಯ ಮತ್ತು ಸಾಲದ ಜೊತೆಗೆ ಸಾವಯವ ಕೃಷಿ, ಮಹಿಳೆ ಮತ್ತು ಆರೋಗ್ಯ, ಪರಿಸರಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅರಿವು ಮತ್ತು ತರಬೇತಿಗಳನ್ನು ನೀಡಲಾಗುತ್ತಿದೆ. ಆದರೂ ಕೆಲವು ಸಂಸ್ಥೆಗಳು ಹೆಸರಿಗೆ ಮಾತ್ರ ಇದ್ದು, ಪರಿಣಾಮಕಾರಿಯಾದ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿಲ್ಲ.

## ಕೃಷಿ

ಪುಣಜನೂರು ವಲಯದ ಜನರಿಗೆ ಕೃಷಿಯು ಮುಖ್ಯ ಕಸುಬಾದರೂ ವಲಸೆ ಹೋಗುವುದು ಸಾಮಾನ್ಯವಾಗಿದೆ. ಭೂ ಹಿಡುವಳಿ ಒಡೆತನದ ಪ್ರಮಾಣ ಲಂಬಾಣಿ ಸಮುದಾಯದಲ್ಲಿ ಸಾಕಷ್ಟಿದೆ. ಪರಿಶಿಷ್ಟ ಜಾತಿಯ ಆದಿಜಾಂಬವ ಸಮುದಾಯದವರಿಗೆ ಸರ್ಕಾರದಿಂದ ಸೊಸೈಟಿ ಭಾಗವಾಗಿ ೨ ಎಕರೆ ಭೂ ಹಿಡುವಳಿಯನ್ನು ನೀಡಿದ್ದು, ಅದು ಅರಣ್ಯ ಇಲಾಖೆಗೆ ಸೇರಿದ ಭೂಮಿ, ಅಲ್ಲಿನ ರೈತರನ್ನು ತೆರವುಗೊಳಿಸಬೇಕೆಂಬ ಕಾನೂನು ಹೋರಾಟ ನಡೆಯುತ್ತಿದೆ. ಈ ಭಾಗದ ಬಡಗ ಸಮುದಾಯದ ಬಹುತೇಕ ಕುಟುಂಬಗಳು ಮತ್ತು ಮುಸ್ಲಿಂ ಸಮುದಾಯದಲ್ಲಿ ಕೆಲವೇ ಕುಟುಂಬಗಳು ಭೂಮಿಯ ಒಡೆತನವನ್ನು ಹೊಂದಿವೆ. ಆದರೆ ಗಿರಿಜನ ಸಮುದಾಯಗಳಿಗೆ ಈವರೆವಿಗೂ ಭೂ ಒಡೆತದನ ಹಕ್ಕು ಲಭಿಸಿರಲಿಲ್ಲ. ಪ್ರಸ್ತುತ ೨೦೦೬ ರ ಪಾರಂಪರಿಕ ಅರಣ್ಯ ಹಕ್ಕುಗಳ ಕಾಯಿದೆಯಡಿ ೨೦೧೦–೧೧ನೇ ಸಾಲಿನಲ್ಲಿ ಭೂಮಿಯ ಹಕ್ಕು ಪತ್ರಗಳನ್ನು ನೀಡಲಾಗುತ್ತಿದೆ. ಈ ಪ್ರದೇಶದಲ್ಲಿರುವ ಭೂಮಿಯು ಪರಿಶಿಷ್ಟ

ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಅರಣ್ಯ ಪ್ರದೇಶದ ಒಡೆತನಕ್ಕೆ ಸೇರಿರುವುದರಿಂದ ಇತರರು ಕೊಂಡುಕೊಳ್ಳಲು ಅವಕಾಶವಾಗಿಲ್ಲ. ಈ ಹಿಂದೆ ಮಾರಾಟ ಮಾಡಿದ ಭೂಮಿಯ ಒಡೆತನದ ಬಗ್ಗೆ ಪ್ರಸ್ತುತ ಕಾನೂನು ಹೋರಾಟಗಳು ನಡೆಯುತ್ತಿವೆ.

ಈ ಭಾಗದಲ್ಲಿ ಹೆಚ್ಚು ಮಳೆ ಆಶ್ರಿತ ಬೆಳೆಗಳಾದ ರಾಗಿ, ಮುಸುಕಿನ ಜೋಳ, ಹುರುಳಿ, ಹೆಸರು, ಅವರೆ ಬೆಳೆಯುತ್ತಾರೆ. ಪಂಪ್‌ಸೆಟ್ ವ್ಯವಸ್ಥೆ ಇರುವವರು ಕಬ್ಬು, ಅರಿಶಿನ, ಶುಂಠಿ, ಬಾಳೆ, ಬೀನ್ಸ್, ಚಂಡುಮಲ್ಲಿಗೆ ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ. ಮುಖ್ಯವಾಗಿ ರೈತರು ಗುತ್ತಿಗೆ ಆಧಾರದಲ್ಲಿ ತಮ್ಮ ಭೂಮಿಯನ್ನು ಕೇರಳದವರಿಗೆ ನೀಡುತ್ತಿದ್ದು, ಶುಂಠಿ ಮತ್ತು ಅರಿಶಿನ ಬೆಳೆಗಳ ಕಡೆ ಆದ್ಯತೆ ನೀಡಲಾಗುತ್ತಿದೆ. ರೈತರು ಸಾಂಪ್ರದಾಯಿಕ ಕೃಷಿ ವಿಧಾನಗಳ ಮೂಲಕ ವ್ಯವಸಾಯ ಮಾಡುತ್ತಿದ್ದಾಗ ತಾವೇ ಬಿತ್ತನೆ-ಬೀಜಗಳನ್ನು ಸಂರಕ್ಷಣೆ ಮಾಡಿ, ಬಿತ್ತನೆ ಕಾಲದಲ್ಲಿ ಬಳಸುತ್ತಿದ್ದರು. ಆದರೆ ಸರ್ಕಾರದ ಆಧುನಿಕ ಕೃಷಿ ಪದ್ಧತಿ ಹಾಗೂ ಖಾಸಗಿ ಕಂಪನಿಗಳ ಲಾಭಕೋರತದನದಿಂದಾಗಿ ರೈತರು ಬಿತ್ತನೆ-ಬೀಗಳಿಗೆ ಕಂಪನಿಗಳನ್ನು ಅವಲಂಬಿಸಬೇಕಾಗಿದೆ. ರೈತರು ಹೆಚ್ಚು ಫಲವನ್ನು ಪಡೆಯಬೇಕೆಂಬ ಒತ್ತಡದಿಂದಾಗಿ ಬೆಳೆಗಳಿಗೆ ವಿಪರೀತವಾದ ಕ್ರಿಮಿನಾಶಕ ಹಾಗೂ ರಸಾಯಿನಿಕ ಗೊಬ್ಬರವನ್ನು ಬಳಸಿ ಭೂಮಿಯನ್ನು ಬರಡಾಗಿಸುತ್ತಿದ್ದಾರೆ. ಅಲ್ಲದೆ ಕೃಷಿ ಕೂಲಿ ಕೂಡ ದುಬಾರಿಯಾಗಿದ್ದು, ಬೆಳೆಗಳಿಗೆ ಉತ್ತಮ ಬೆಲೆ ಇಲ್ಲದ್ದು ಒಂದೆಡೆಯಾದರೆ, ಇನ್ನೊಂದೆಡೆ ಪ್ರಾಣಿಗಳ ಹಾವಳಿ ಮತ್ತು ಮಳೆಯ ಅನಿಶ್ಚಿತತೆಯಿಂದ ರೈತರು ನಷ್ಟದ ಭೀತಿಯನ್ನು ಎದುರಿಸುತ್ತಿದ್ದಾರೆ. ಕೃಷಿಯನ್ನು ಜೀವನಾಧಾರವಾಗಿ ನೋಡದೆ, ವಾಣಿಜ್ಯಾತ್ಮಕವಾಗಿ ಪರಿಗಣಿಸಿತ್ತಿದ್ದಾರೆ. ಹಾಗಾಗಿ ಬದಲಾಗುತ್ತಿರುವ ಹವಮಾನವನ್ನು ಅರ್ಥಮಾಡಿಕೊಳ್ಳುವುದು ಮತ್ತು ಆಹಾರ ಸಂರಕ್ಷಣೆ ಮೂಲಕ ಆರೋಗ್ಯ ಮತ್ತು ಕೃಷಿಯಲ್ಲಿ ಸುಸ್ಥಿರವಾದ ಬದುಕನ್ನು ಕಂಡುಕೊಳ್ಳಲು ಸಾಕಷ್ಟು ಅರಿವಿನ ಅಗತ್ಯವಿದೆ.

**(ಸೂಚನೆ : ಕೃಷಿಗೆ ಸಂಬಂಧಿಸಿದ ಹೆಚ್ಚಿನ ವಿವರಗಳನ್ನು ಪ್ರತ್ಯೇಖವಾದ ಕೃಷಿ ಅಧ್ಯಯನದಲ್ಲಿ ನೀಡಲಾಗಿದೆ)**

**ಪಶುಪಾಲನೆ**

ಈ ಪ್ರದೇಶದ ಸುಮಾರು ಶೇಕಡ ೩೦ ರಿಂದ ೪೦ ರಷ್ಟು ಕುಟುಂಬಗಳು ಹಸು, ಎತ್ತು, ಕರುಗಳು ಮತ್ತು ಮೇಕೆಗಳನ್ನು ಜೀವನೋಪಾಯದ ಭಾಗವಾಗಿ ಸಾಕುತ್ತಿದ್ದಾರೆ. ಈ ಸಾಕು ಪ್ರಾಣಿಗಳನ್ನು ಹಿಂಡು ಹಿಂಡಾಗಿ ಕಾಡಿಗೆ ಅಟ್ಟುವುದು ಸಾಮಾನ್ಯವಾಗಿದ್ದು, ವ್ಯವಸಾಯದ ಸಂದರ್ಭಗಳಲ್ಲಿ ಮಾತ್ರ ನಿಗಾ ಇಟ್ಟು ನೋಡಿಕೊಳ್ಳುತ್ತಾರೆ. ನಾಡು ಹಸುಗಳನ್ನು ಹೆಚ್ಚಾಗಿ ಸಾಕುತ್ತಿದ್ದರೂ ಹಾಲು, ಮೊಸರು, ಬೆಣ್ಣೆ ಉತ್ಪನ್ನಗಳು ಬಹಳ ಕಡಿಮೆ ಇದೆ. ದನ ಕರು, ಮೇಕೆಗಳಿಂದ ಸಂಗ್ರಹವಾಗುವ ತಿಪ್ಪೆ ಗೊಬ್ಬರವನ್ನು ಒಂದು ಲಾರಿಗೆ ೧೦ ರಿಂದ ೧೨ ಸಾವಿರ ರೂಪಾಯಿಗಳ'ವರೆಗೆ ಕೇರಳ, ತಮಿಳುನಾಡು, ಶಿವಮೊಗ್ಗದ ಶಿಕಾರಿಪುರ ಮುಂತಾದೆಡೆಗೆ ಮಾರಾಟ ಮಾಡಲಾಗುತ್ತಿದೆ. ಕೆಲವು ರೈತರು ತಮ್ಮ ಭೂಮಿಗೆ ತಿಪ್ಪೆ ಗೊಬ್ಬರವನ್ನು ಸ್ವಲ್ಪ ಪ್ರಮಾಣದಲ್ಲಿ ಬಳಸುತ್ತಿದ್ದು, ರಸಾಯನಿಕ ಗೊಬ್ಬರವನ್ನು ಬಳಸುವವರ ಸಂಖ್ಯೆ ಹೆಚ್ಚಾಗಿದೆ.

## ಗಿಡಮೂಲಿಕೆ ಔಷಧಗಳ ಬಳಕೆ

ಸೋಲಿಗ ಸಮುದಾಯದ ಕೆಲವು ಹಿರಿಯರು ಗಿಡ ಮೂಲಿಕೆ ಔಷಧ ಬಳಕೆಯ ಬಗ್ಗೆ ತಿಳಿದಿದ್ದು, ಅನಾರೋಗ್ಯದ ಸಮಸ್ಯೆಗಳಿದ್ದಾಗ ಗಿಡ ಮೂಲಿಕೆ ಔಷಧವನ್ನು ಬಳಸುತ್ತಾರೆ. ಗಿಡ ಮೂಲಿಕೆ ಔಷಧಿಗಳಿಂದ ನಿಧಾನಗತಿಯಲ್ಲಿ ಗುಣಮುಖರಾಗುವುದು ಹಾಗೂ ಗಿಡಮೂಲಿಕೆಗಳನ್ನು ಕಾಡಿನಿಂದ ಹುಡುಕಿ ತರುವ ಸಮಸ್ಯೆಗಳಿಂದ ಬಳಕೆ ಮಾಡುವುದು ತುಂಬಾ ಕಡಿಮೆ ಆಗಿದೆ. ಜನಪದಿಯ ಅಥವಾ ನ್ಯಾಚುರಲ್ ಮೆಡಿಸನ್ ನೀಡುವ ಸಲುವಾಗಿ ಕೋಳಿಪಾಳ್ಯ ಗ್ರಾಮದಲ್ಲಿ ಖಾಸಗಿ ಆಸ್ಪತ್ರೆ ತರೆಯಲಾಗಿದ್ದು, ಜನರು ಉಪಯೋಗಿಸಿಕೊಳ್ಳದ ಕಾರಣ ಮುಚ್ಚಲಾಗಿದೆ. ನಾವು ಗಮನಿಸಿದಂತೆ ಗಿರಿಜನ ಸಮುದಾಯದಲ್ಲಿ ಅನಾರೋಗ್ಯದ ಸಮಸ್ಯೆಗಳು ಸಾಕಷ್ಟು ಪ್ರಮಾಣದಲ್ಲಿದ್ದು, ಜನರು ಆಸ್ಪತ್ರೆ, ಔಷದ ಹಾಗೂ ಬಸ್ ಪ್ರಯಾಣದ ವೆಚ್ಚವನ್ನು ಭರಿಸಲು ಸಾಧ್ಯವಾಗದೇ ನೋವಿನಲ್ಲೇ ನರುಳುವ ಸ್ಥಿತಿ ಇದೆ. ಅಲ್ಲದೆ ಸೋಲಿಗ ಸಮುದಾಯದಲ್ಲಿ ಮಕ್ಕಳಾದಿಯಾಗಿ ಅನೇಕ ಜನರಲ್ಲಿ ಅಪೌಷ್ಠಿಕತೆ ಮತ್ತು ರಕ್ತ ಹೀನತೆಯ ಸಮಸ್ಯೆಗಳು ಹೆಚ್ಚಾಗಿ ಕಂಡು ಬರುತ್ತವೆ. ಗಿರಿಜನ ಕಾಲೋನಿಗೆ ಕರುಣಾ ಟ್ರಸ್ಟ್‌ನ ಸಂಚಾರಿ ಆರೋಗ್ಯ ಘಟಕವು ಭೇಟಿ ನೀಡಿ ಆರೋಗ್ಯ ತಪಾಸಣೆ ಮಾಡುತ್ತಿದ್ದು, ಉಪಯೋಗಿಸಿಕೊಳ್ಳುವವರ ಪ್ರಮಾಣ ಕಡಿಮೆ ಇದೆ.

ಗಿರಿಜನ ಸಮುದಾಯದಲ್ಲಿ ಗಿಡ ಮೂಲಿಕೆ ಔಷಧಿಯ ಬಳಕೆಯ ಬಗ್ಗೆ ಕುಟುಂಬದಿಂದ ಅಥವಾ ಅವರ ಸಮುದಾಯದಿಂದ ಒಬ್ಬರಿಂದ ಒಬ್ಬರಿಗೆ ವರ್ಗಾಯಿಸುತ್ತಾ ಬಂದಿರುವ ಜ್ಞಾನವನ್ನು ಬೇರೆಯವರಿಗೆ ತಿಳಿಸದಂತೆ ಗುಟ್ಟಾಗಿ ಇಟ್ಟುಕೊಳ್ಳಬೇಕು. ಇಲ್ಲದಿದ್ದರೆ ತಮಗೆ ತಿಳಿದಿರುವ ಜ್ಞಾನ ಮರೆತು ಹೋಗುತ್ತದೆ ಎಂಬ ನಂಬಿಕೆ ಇರುವುದರಿಂದ ಔಷಧಿಗೆ ಬಳಸುವ ಸಸ್ಯಗಳ ಹೆಸರನ್ನು ಕೂಡ ಹೇಳುವುದಿಲ್ಲ. ಆದರೂ ಕೆಲವರು ಗಿಡಮೂಲಿಕೆ ಔಷಧಿಗಳ ಬಗ್ಗೆ ತಿಳಿಸಿದ್ದಾರೆ. ಅವುಗಳ ವಿವರ ಹೀಗಿದೆ.

**ಗಿಡಮೂಲಿಕೆ ಔಷಧವಾಗಿ ಬಳಸುವ ಕುರಿತ ವಿವರ ಪಟ್ಟಿ**

| ಕ್ರ.ಸಂ | ಆರೋಗ್ಯ ಸಮಸ್ಯೆಗಳು | ಗುಣಪಡಿಸಬಹುದಾದ ಹಾಗೂ ಬಳಕೆಯಲ್ಲಿರುವ ಗಿಡಮೂಲಿಕೆಗಳ ವಿವರ |
|---|---|---|
| | ಭೇದಿ (ಹೊಟ್ಟೆ ಕಳೆಯುವುದು ನಿಲ್ಲಿಸಲು)ಗೆ | ಕಡ್ಡಿಮಲ್ಲಿಗೆ ರಸ ಕುಡಿಯಬೇಕು |
| | ಜ್ವರ ಬಂದಾಗ | ವಾಸನದ ರಸ ಕುಡಿಯಬೇಕು |
| | ಹೊಟ್ಟೆಯ ಗ್ಯಾಸ್ ಖಾಲಿ ಮಾಡಲು | ಶೀಗೆ ಸೊಪ್ಪು ಬೇಯಿಸಿ ತಿನ್ನಬೇಕು |
| | ರಕ್ತ ಪುಷ್ಠಿಗೆ | ಮುಷ್ಟಿಸೊಪ್ಪು ಬಳಸಬೇಕು |
| | ಕೆಮ್ಮು ಕಡಿಮೆಯಾಗಲು | ಗಣಕೆ ಸೊಪ್ಪಿನ ಪಲ್ಯ ಮತ್ತು ಜೇನು ತುಪ್ಪ ಸೇವಿಸಬೇಕು |
| | ತಲೆಗಾಯ/ತಲೆಗೂದಲು ಉದುರುವುದಕ್ಕೆ | ಸುಜ್ಜಲ ಪುಡಿ ಮತ್ತು ಶೀಗೆ ಪುಡಿ ಬಳಸಬೇಕು |
| | ತಲೆನಿವಿಗೆ | ತುರಸಕೆ ಗಿಡದ ರಸ ಕುಡಿಯಬೇಕು |
| | ಹೊಟ್ಟೆ ನೋವಿಗೆ | ಬಟ್ಟಲ ಬೇರು, ಗಣಕೆ ಸೊಪ್ಪು ರಸ ಸೇರಿಸಿ ಕುಡಿಯಬೇಕು |
| | ಗುಂಡಿಗೆ ಅಥವಾ ಎದೆ ನೋವಿಗೆ | ತಾರೆ ಮರದ ಪಟ್ಟೆ ರಸ, ಜೀರಿಗೆ ಹಾಕಿ ತಣ್ಣೀರಿನಿಂದ ಕುಡಿಯಬೇಕು |
| | ತುಟಿ ಬಿರಿಯುವುದನ್ನು ತಡೆಗಟ್ಟಲು | ಹತ್ತಿಪಟ್ಟೆ ರಸ ಮತ್ತು ಹಾಲನ್ನು ತುಟಿಗೆ ಉಜ್ಜಬೇಕು |
| | ಚಳಿಗಾಲದಲ್ಲಿ ಮೈಕೈ ಮೆದು/ನಯವಾಗಲು (ಸ್ಮೂತ್) | ಸುಜ್ಜಲ ಪುಡಿಯನ್ನು ಮೈಕೈಗೆ ತೀಡಿ ಸ್ನಾನ ಮಾಡಬೇಕು |
| | ಗಾಯಗಳಿಗೆ | ಕಗ್ಗಲಿಮರದ ಪುಡಿ ಮಾಡಿ ಹಾಕಬೇಕು |
| | ಕಾಲುಮುರಿತಕ್ಕೆ | ಹುಣಸೇ ಸೊಪ್ಪು ಬೇಯಿಸಿ ಬಟ್ಟೆ ಕಟ್ಟುವುದು |
| | ಬಾಯಲ್ಲಿ ನೊರೆ ತರಹ ಬಂದರೆ | ಗೋಜೆ, ಈಜೆ ಮತ್ತು ಬೇಲದ ಮರದ ತೊಗಟೆ ರಸ ಕುಡಿಸಬೇಕು ಅಥವಾ ಊಟಕ್ಕೆ ಮೊದಲು ಹಸಿಯಾದ ಉರುಳಿಯನ್ನು ತಿನ್ನಬೇಕು. |
| | ಬೂದ್ ಜವನ ಸೊಪ್ಪು | ಹೆಣ್ಣು ಮಕ್ಕಳಿಗೆ ಬಿಳಿಸೆರಗು ಆದಾಗ ಪಥ್ಯದಲ್ಲಿ ನೀಡಲಾಗುತ್ತದೆ |

## ಅರಣ್ಯ ಉಪ ಉತ್ಪನ್ನಗಳು

ಪುಣಜನೂರು ಪಂಚಾಯಿತಿಯ ವ್ಯಾಪ್ತಿಯಲ್ಲಿ ಸಂಪದ್ಭರಿತ ಅರಣ್ಯ ಪ್ರದೇಶವಿದ್ದು, ಕಾಡಿನ ಉತ್ಪನ್ನಗಳಾದ ಬಿದಿರು, ಒಣ ಕಟ್ಟಿಗೆ, ಮಾಗಳಿ ಬೇರು, ನೆಲ್ಲಿಕಾಯಿ, ಅಂಟುವಾಳ, ಸೀಗೆಕಾಯಿ, ಪಾಸೆ, ಜೇನು ತುಪ್ಪ ಮುಂತಾವುಗಳನ್ನು ಸಂಗ್ರಹಿಸಿ ಗಿರಿಜನರು ಜೀವನ ನಡೆಸಲು ಅನುಕೂಲವಾಗಿದೆ. ಆದರೆ ಸಂರಕ್ಷಿತ ಅರಣ್ಯ ಪ್ರದೇಶವೆಂದು ಘೋಷಣೆ ಮಾಡಿರುವ ಕಾರಣದಿಂದಾಗಿ ಗಿರಿಜನರಿಗೆ ಕಾಡಿನ ಉಪ ಉತ್ಪನ್ನಗಳನ್ನು ಬಳಸಲು ಅವಕಾಶ ಇರಲಿಲ್ಲ. ಪ್ರಸ್ತುತ ೨೦೦೬ ರ ಪಾರಂಪರಿಕ ಅರಣ್ಯ ಹಕ್ಕುಗಳ ಕಾಯಿದೆಯನ್ವಯ ಕಿರು ಅರಣ್ಯ ಉತ್ಪನ್ನಗಳನ್ನು ಬಳಸಿಕೊಂಡು ಜೀವನ ನಡೆಸಲು ಅವಕಾಶ ಕಲ್ಪಿಸಲಾಗುತ್ತಿದೆ. ಇಲ್ಲಿನ ಬಹುತೇಕ ಗ್ರಾಮಗಳಲ್ಲಿ ಬಿದಿರಿನಿಂದ ತಮ್ಮ ಮನೆಯ ಬೇಲಿಗಳನ್ನು ವ್ಯವಸ್ಥಿತವಾಗಿ ನಿರ್ಮಿಸಿಕೊಂಡಿರುವುದನ್ನು ಕಾಣಬಹುದು. ಅದರಲ್ಲಿ ಲಂಬಾಣಿ ಜನಾಂಗ ವಾಸಿಸುವ ಗ್ರಾಮಗಳಲ್ಲಿ ಬಿದಿರಿನ ಅಚ್ಚೆಗಳಿಂದ ನಿರ್ಮಿಸಿದ್ದು, ಸೋಲಿಗ ಜನಾಂಗ ವಾಸಿಸುವ ಗ್ರಾಮಗಳಲ್ಲಿ ಸಣ್ಣ ಬಿ ದಿರು ಕಡ್ಡಿಗಳಿಂದ ಒತ್ತೊತ್ತಾಗಿ ಮನೆಯ ಸುತ್ತ ಬೇಲಿಗಳನ್ನು ಹೆಣೆದಿರುತ್ತಾರೆ. ಇದಲ್ಲದೆ ಬಿದಿರನ್ನು ಏಣಿ, ಮಕ್ಕರಿ, ಮನೆಯ ಮೇಲ್ಚಾವಣಿಗೆ ಬಳಸುತ್ತಾರೆ. ಬಿದಿರಿನಿಂದ ಬುಟ್ಟಿ ಎಣೆಯುವ ಕೌಶಲ್ಯಗಳಿದ್ದರೂ ಈಗ ಹೆಚ್ಚು ಜನರು ಈ ಕಸುಬನ್ನು ಮಾಡುತ್ತಿಲ್ಲ. ಇಲ್ಲಿಯ ಕೆಲವು ಗಿರಿಜನ ಕುಟುಂಬಗಳ ಒಣ ಕಟ್ಟಿಗೆಯನ್ನು ಸಂಗ್ರಹಿಸಿ ಹೋಟೆಲ್, ಲಾರಿಯವರಿಗೆ ಮಾರಾಟ ಮಾಡುತ್ತಾರೆ. ಮೇ ತಿಂಗಳಿಂದ ಜುಲೈ ತಿಂಗಳವರೆಗೆ ಜೇನು ಹನಿ ಸಂಗ್ರಹ, ಹೆಚ್ಚು ಮಳೆ ಬೀಳುವ ಸಂದರ್ಭದಲ್ಲಿ ಪಾಚಿ ಸಂಗ್ರಹ, ಮಾಗಳಿ ಬೇರು ದೀಪಾವಳಿಯಿಂದ ಡಿಸೆಂಬರ್ ತಿಂಗಳವರೆಗೂ ದೊರಕುತ್ತದೆ. ಡಿಸೆಂಬರ್‌ನಿಂದ ಫೆಬ್ರವರಿವರಗೆ ನೆಲ್ಲಿಕಾಯಿ ಸಂಗ್ರಹ ಮಾಡಿ ಜಿಲ್ಲಾ ಹಂತದ ಲ್ಯಾಂಪ್ಸ್ ಸೊಸೈಟಿಗೆ ಮಾರಾಟ ಮಾಡುತ್ತಾರೆ. ಇದರಿಂದ ಬಂದ ಹಣದಿಂದ ಆಹಾರ ಪದಾರ್ಥಗಳು, ಬಟ್ಟೆ ಹಾಗೂ ಸಣ್ಣ ಪುಟ್ಟ ಗೃಹ ಬಳಕೆಯ ವಸ್ತುಗಳನ್ನು ತೆಗೆದುಕೊಳ್ಳುತ್ತಾರೆ. ಕೆಲವರು ಈ ಹಿಂದೆ ಮಾಡಿದ ಸಾಲವನ್ನು ತೀರಿಸುತ್ತಾರೆ.

## ನೇಯ್ಗೆ ಮತ್ತು ಹೊಲಿಗೆ


ಈ ಭಾಗದ ಜನರು ಸೇಲಂ, ತಿರುಪೂರು, ಕೊಯಮತ್ತೂರು ಮುಂತಾದ ಕಡೆ ಬಟ್ಟೆ ಕಾರ್ಖಾನೆ ಮತ್ತು ಗಾರ್ಮೆಂಟ್ಸ್‌ಗಳಲ್ಲಿ ಕೆಲಸ ಮಾಡಲು ಆಕರ್ಷಿತರಾಗಿ ವಲಸೆ ಹೋಗುವುದು ಸಾಮಾನ್ಯವಾಗಿದೆ. ಲಂಬಾಣಿ ಸಮುದಾಯದ ಸಾಂಪ್ರದಾಯಿಕ ಉಡುಪು ತಯಾರಿ, ನೇಯ್ಗೆ ಮತ್ತು ಕಸೂತಿ ಕೆಲಸಗಳಿಗೆ

ಸಂಬಂಧಿಸಿದಂತೆ ಚೇತನ ಹವ್ಯಾಸಿ ಬಳಗ ದೊಡ್ಡಮೂಡಳ್ಳಿಯಲ್ಲಿ ತರಬೇತಿ ನೀಡುತ್ತಿದ್ದು, ಕೆಲವರಿಗೆ ಉದ್ಯೋಗವಕಾಶವನ್ನು ಕಲ್ಪಿಸಿದೆ. ಈ ಪ್ರಯತ್ನದ ಫಲವಾಗಿ ಸರ್ಕಾರದಿಂದ ವರ್ಷಕ್ಕೆ ೧೦೦ ಜನ ಫಲಾನುಭವಿಗಳಿಗೆ ತಲಾ ೨೦,೦೦೦ ರೂಪಾಯಿಗಳ ಸಾಲ ನೀಡಲಾಗುತ್ತಿದ್ದು, ಅದರಲ್ಲಿ ೧೦,೦೦೦ ರೂಪಾಯಿಗಳ ರಿಯಾಯಿತಿ ನೀಡಲಾಗುತ್ತಿದೆ. ಈ ಫಲಾನುಭವಿಗಳಿಗೆ ತರಬೇತಿ ಮತ್ತು ಮಾರ್ಗದರ್ಶನ ನೀಡುವುದು, ಸಿದ್ಧಪಡಿಸಿದ ಉಡುಪುಗಳ ಮಾರಾಟ ವ್ಯವಸ್ಥೆಯ ಜವಾಬ್ದಾರಿಯನ್ನು ಚೇತನ ಹವ್ಯಾಸಿ ಬಳಗ ನಿರ್ವಹಿಸುತ್ತಿದೆ. ಇದರಿಂದ ಲಂಬಾಣಿ ಸಮುದಾಯಕ್ಕೆ ಕಸೂತಿ ಕೆಲಸದ ಮೂಲಕ ಸ್ವಲ್ಪ ಮಟ್ಟಿನ ಸಹಾಯವಾಗುತ್ತಿದೆ. ಇವರು ತಮ್ಮ ಸಾಂಪ್ರದಾಯಿಕ ಉಡುಪುಗಳನ್ನು ಮಾರಾಟ ಮಾಡಲು ಪ್ರಾಮುಖ್ಯತೆ ಕೊಡುತ್ತಾರೆ ವಿನಃ ಇವರ್‍ಯಾರು ಧರಿಸುತ್ತಿಲ್ಲ. ಸ್ಥಳೀಯವಾಗಿ ಸರ್ಕಾರಿ ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಹೊಲಿಗೆ ತರಬೇತಿ ನೀಡುತ್ತಿವೆ. ಈ ತರಬೇತಿಗಳನ್ನು ಸೋಲಿಗ, ಲಂಬಾಣಿ, ಮುಸ್ಲಿಂ ಹಾಗೂ ಇತರೆ ಸಮುದಾಯಗಳ ಮಹಿಳೆಯರು ಪಡೆದುಕೊಳ್ಳುತ್ತಿದ್ದಾರೆ. ಆದರೆ ಈ ತರಬೇತಿಗಳು ಯೋಜನಾ ವ್ಯಾಪ್ತಿಗೆ ಸೀಮಿತವಾಗಿದ್ದು, ಸೋಲಿಗರಿಗೆ ತಮ್ಮದಲ್ಲದ ಕಸುಬಾಗಿರುವುದರಿಂದ ಹೊಲಿಗೆ ಕೆಲಸವನ್ನು ಮುಂದುವರಿಸಲು ಸಾಧ್ಯವಾಗುತ್ತಿಲ್ಲ. ಸ್ವಯಂ ಸೇವಾ ಸಂಸ್ಥೆಯವರು ಹೊಲಿಗೆ ಯಂತ್ರಗಳನ್ನು ಕೊಡುವುದು ಮತ್ತು ಬಟ್ಟೆ ಕಾರ್ಖಾನೆಗಳನ್ನು ತೆರೆಯುವುದಾಗಿ ಭರವಸೆ ನೀಡುತ್ತಾರೆ. ಆದರೆ ತರಬೇತಿ ಮುಗಿದ ನಂತರ ಅವರು ನೀಡಿದ ಭರವಸೆ ಈಡೇರುವುದಿಲ್ಲ ಎಂದು ಸ್ಥಳೀಯರು ತಿಳಿಸಿರುತ್ತಾರೆ. ಕೋಳಿಪಾಳ್ಯ, ಪುಣಜನೂರು ಗ್ರಾಮಗಳಲ್ಲಿ ವಿಶೇಷವಾಗಿ ಮುಸ್ಲಿಂ ಸಮುದಾಯದ ಕೆಲವು ಕುಟುಂಬಗಳು ಟೈಲರ್ ವೃತ್ತಿಯನ್ನು ಅವಲಂಬಿಸಿದ್ದಾರೆ.

## ಮರಗೆಲಸ ಮತ್ತು ಗಾರೆ ಕೆಲಸ

ಈ ಪ್ರದೇಶದ ಲಂಬಾಣಿ ಸಮುದಾಯದಲ್ಲಿ ಮರಗೆಲಸ ಮಾಡುವ ಮೂರ್‍ನಾಲ್ಕು ಜನರಿದ್ದು, ಸೋಲಿಗ ಸಮುದಾಯದ ಎಂಟತ್ತು ಜನರು ಮರಗೆಲಸ ಮಾಡುತ್ತಿದ್ದಾರೆ. ಅಲ್ಲದೆ ಹೆಗ್ಗಡದೇವನ ಕೋಟೆಯಿಂದ ಬಂದ ಮೂವರು ಮರಗೆಲಸ ಮಾಡುತ್ತಿದ್ದು, ಸ್ಥಳೀಯರ ಗೃಹ ನಿರ್ಮಾಣ ಹಾಗೂ ಪೀಠೋಪಕರಣಗಳನ್ನು ಸಿದ್ಧಪಡಿಸುತ್ತಾರೆ. ಲಂಬಾಣಿ ಹಾಗೂ ಆದಿ ಜಾಂಬವ ಸಮುದಾಯದ ಸುಮಾರು ನೂರಕ್ಕಿಂತಲೂ ಹೆಚ್ಚು ಜನರು ಗಾರೆ ಕೆಲಸಗಳನ್ನು ಮಾಡುತ್ತಿದ್ದು ಕೇರಳ, ತಮಿಳುನಾಡು ಕಡೆ ಹಾಗೂ ಸ್ಥಳೀಯವಾಗಿ ಕಟ್ಟಡ ನಿರ್ಮಾಣದ ಕೆಲಸಗಳನ್ನು ಮಾಡುತ್ತಾರೆ. ಇವರ ಜೊತೆ ಈ ಭಾಗದ ಸುಮಾರು ಜನರು ಗಾರೆ ಕೆಲಸದವರಿಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದಾರೆ.

ಋತುಮಾನ ವಿಶೇಷತೆಗಳು-2011-12 ಪುಣಜನೂರು ವಲಯ




## ವಿವಿಧ ಸಮುದಾಯಗಳ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂಶಗಳು

ಪುಣಜನೂರು ಪಂಚಾಯಿತಿ ವ್ಯಾಪ್ತಿಯಲ್ಲಿ ಸೋಲಿಗ ಮತ್ತು ಲಂಬಾಣಿ ಸಮುದಾಯಗಳು ಹೆಚ್ಚಿನ ಪ್ರಮಾಣದಲ್ಲಿದ್ದು, ಅಲ್ಪ ಪ್ರಮಾಣದಲ್ಲಿ ಮುಸ್ಲಿಂ, ಬಡಗ, ಲಿಂಗಾಯಿತ ಹಾಗೂ ಒಂದೆರಡು ಕುಂಬಾರ, ಈಡಿಗ ಕುಟುಂಬಗಳು ವಾಸಿಸುತ್ತಿವೆ. ಇವರ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ

ಹಿನ್ನೆಲೆಗಳು ಬೇರೆ ಬೇರೆ ಆಗಿದ್ದು, ಪ್ರಸ್ತುತದಲ್ಲಿ ಅವರ ಆಚಾರ–ವಿಚಾರ, ಉಡುಗೆ–ತೊಡಿಗೆ, ಹಬ್ಬ–ಹರಿದಿನ ಹಾಗೂ ಮದುವೆಗಳಲ್ಲಿ ಸಾಕಷ್ಟು ಭಿನ್ನತೆಗಳಿವೆ. ಎಲ್ಲಾ ಸಮುದಾಯಗಳಲ್ಲೂ ಮಾರ್ಚ್ ತಿಂಗಳಲ್ಲಿ ಲಕ್ಷ್ಮಿದೇವಿ, ಕುಂಭೇಶ್ವರ, ಚಾಮುಂಡಿ, ಮಾರಿಯಮ್ಮನ್, ಕಂಡಾಯೋತ್ಸವ, ಜಡೆಸ್ವಾಮಿ ಜಾತ್ರೆಗಳು ಕಂಡುಬರುತ್ತವೆ. ಈ ಹಬ್ಬ ಮತ್ತು ಜಾತ್ರೆಗಳಲ್ಲಿ ಲಂಬಾಣಿ ಸಮುದಾಯವು ಜಾತ್ರೆಗಳನ್ನು ಅದ್ದೂರಿಯಾಗಿ ಆಚರಿಸುತ್ತಿದ್ದು ಹೆಚ್ಚಿನ ಹಣ ಖರ್ಚು ಮಡುತ್ತಾರೆ. ಪ್ರತಿ ಕುಟುಂಬಕ್ಕೆ ಸರಾಸರಿ ಹತ್ತು ಸಾವಿರಕ್ಕಿಂತ ಹೆಚ್ಚಿನ ಖರ್ಚು ಬೀಳುತ್ತದೆ. ಜಾತ್ರೆ ನಡೆಯುವ ಬಹುತೇಕ ಗ್ರಾಮಗಳಲ್ಲಿ ಕೊಂಡೋತ್ಸವಕ್ಕಾಗಿ ಹೆಚ್ಚಿನ ಮರಮಟ್ಟುಗಳನ್ನು ಬಳಸಲಾಗುತ್ತದೆ. ಈ ಹಬ್ಬ ಮತ್ತು ಜಾತ್ರೆಗಳಲ್ಲಿ ಮನರಂಜನೆಗಾಗಿ ಆರ್ಕೆಸ್ಟ್ರಾ, ನಗಾರಿ ಕುಣಿತ, ಕಂಸಾಳೆ, ಗೊರವರ ಕುಣಿತ, ಬಡಗ ಮತ್ತು ಸೋಲಿಗ ನೃತ್ಯಗಳು ಕಂಡುಬರುತ್ತವೆ. ಎಲ್ಲಾ ಸಮುದಾಯದ ಹಬ್ಬ, ಜಾತ್ರೆಗಳಲ್ಲಿ ಸಿಹಿಯೂಟ ಮತ್ತು ಮಾಂಸಾಹಾರ ವಿಶೇಷವಾಗಿರುತ್ತದ್ದು, ಜೊತೆಗೆ ಮಧ್ಯಪಾನವು ಹೆಚ್ಚಾಗಿರುತ್ತದೆ. ಈ ಜಾತ್ರೆಗಳ ನಂತರ ಯುಗಾದಿ ಹಬ್ಬದಲ್ಲಿ ಪ್ರತಿ ಕುಟುಂಬದವರು ಮಲೆ ಮಹದೇಶ್ವರ ಬೆಟ್ಟದ ಜಾತ್ರೆಗೆ ಹೋಗುತ್ತಾರೆ. ನಂತರ ಕೆಲಸಕ್ಕಾಗಿ ವಲಸೆ ಹೋಗುವುದು ಸಾಮಾನ್ಯವಾಗಿದೆ. ಈ ಸಮುದಾಯಗಳ ನಡುವಿನ ಅಂತರ್ ಸಂಬಂಧ ತಿಳಿಯುವುದಾದರೆ, ಬೇರೆ, ಬೇರೆ ಗ್ರಾಮಗಳ ಸಮುದಾಯದವರು ಹಬ್ಬ ಮತ್ತು ಜಾತ್ರೆಗಳಲ್ಲಿ ಪರಸ್ಪರ ಭಾಗವಹಿಸಿ ದೇವರಿಗೆ ಪೂಜೆ ಸಲ್ಲಿಸಿ, ಸಹಭೋಜನ ಮಾಡುವುದು ರೂಢಿಯಲ್ಲಿದೆ. ಈ ಪ್ರದೇಶದಲ್ಲಿ ಲಂಬಾಣಿ, ಸೋಲಿಗ ಸಮುದಾಯಗಳ ಜನಸಂಖ್ಯೆ ಸಮ ಪ್ರಮಾಣದಲ್ಲಿದ್ದು, ಲಂಬಾಣಿ ಸಮುದಾಯವು ಇತರ ಸಮುದಾಯಗಳಿಗಿಂತ ಪ್ರಭಾವಶಾಲಿಯಾಗಿದ್ದು ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಮುಂದಿದೆ. ವಿವಿಧ ಸಮುದಾಯಗಳು ಬುಡಕಟ್ಟು ಸಮುದಾಯದ ಬಗ್ಗೆ ಕೀಳರಿಮೆ ಮನೋಭಾವನೆ ಹೊಂದಿದ್ದು, ಅವರ ಹಬ್ಬ, ಜಾತ್ರೆಗಳ ಸಂದರ್ಭಗಳಲ್ಲಿ ಇತರೆ ಸಮುದಾಯದ ಯುವಜನರ ಪ್ರಾಬಲ್ಯ ಹೆಚ್ಚಾಗಿ ಕಂಡುಬರುತ್ತದೆ. ವಿವಿಧ ಸಮುದಾಯಗಳ ವಿಶೇಷತೆಗಳನ್ನು ಕುರಿತು ಇಲ್ಲಿ ನೀಡಲಾಗಿದೆ.

**ಸೋಲಿಗ ಸಮುದಾಯ :**

ಪುಣಜನೂರು ಪಂಚಾಯಿತಿ ವ್ಯಾಪ್ತಿಯ ೧೫ ಗ್ರಾಮಗಳಲ್ಲಿ ಸೋಲಿಗರು ವಾಸವಾಗಿದ್ದಾರೆ. ಇವರಲ್ಲಿ ೫ ಕುಲದ ಸಳಕರು ಹಾಗೂ ೭ ಕುಲದ ಸೋಲಿಗರು ಎಂಬ ಕುಲಗಳಿವೆ. ಇವರು ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದು, ಕೃಷಿ ಮತ್ತು ಸಾಂಪ್ರದಾಯಿಕ ಕಸುಬುಗಳಲ್ಲಿ ತೊಡಗಿಸಿಕೊಳ್ಳುವುದು ಕಡಿಮೆ ಆಗಿದೆ. ತಮ್ಮ ಜೀವನ ನಿರ್ವಹಣೆಗಾಗಿ ತಮಿಳುನಾಡು, ಕೇರಳ, ಬೇಡಗುಳಿ, ಅತ್ತಿಖಾನೆ ಎಸ್ಟೇಟ್, ಕೊಡಗು ಹಾಗೂ ಬೆಂಗಳೂರು, ಮೈಸೂರು ಕಡೆ ವಲಸೆ ಹೋಗುತ್ತಾರೆ. ಇವರ ಭಾಷೆ ಸೋಲಿಗ ಭಾಷೆ ಆದರೂ ಕನ್ನಡವನ್ನು ಪ್ರಧಾನವಾಗಿ ಬಳಕೆ ಮಾಡುತ್ತಾರೆ. ಪ್ರಸ್ತುತ ಇವರ ಉಡುಗೆಗಳು ತುಂಬಾ

ಬದಲಾಗಿದ್ದು, ಆಧುನಿಕ ಉಡುಗೆಗಳನ್ನು ಧರಿಸುತ್ತಾರೆ. ಅವರ ಹೆಸರು ಕೂಡ ಬದಲಾಗುತ್ತಿವೆ. ಮೊದಲಿಗೆ ಜಡೆಯ, ಮಹದೇವ, ಮಾದೇಶ, ಜಡೆಮಾದಿ, ಮಾದಮ್ಮ, ಬೊಮ್ಮ, ಬೊಮ್ಮಿ ಮುಂತಾದ ಹೆಸರಿಗಳಿಂದ ಕರೆಯುತ್ತಿದ್ದರು. ಇತ್ತೀಚಿಗೆ ಸಿನಿಮಾ ನಟ/ನಟಿಯರ ಹೆಸರುಗಳು ಪ್ರವೇಶವಾಗಿದ್ದು ಪ್ರೇಮ, ವಾಣಿ, ಕುಮಾರಿ ರಜನಿ, ವಿಜಯ್, ಶಿವರಾಜ್, ಗಣೇಶ, ರಮೇಶ್ ಎಂದು ಕರೆಯಲಾಗುತ್ತಿದೆ. ಬಹುತೇಕ ಕುಟುಂಬದ ಸದಸ್ಯರು ಮಧ್ಯಪಾನ ಮಾಡುತ್ತಿರುವುದರಿಂದ ಅವರು ಸಂಪಾದಿಸಿದ ಹಣದಲ್ಲಿ ಹೆಚ್ಚಿನ ಭಾಗವನ್ನು ಮಧ್ಯಪಾನಕ್ಕೆ ವಿನಿಯೋಗಿಸುತ್ತಾರೆ. ಇವರಲ್ಲಿ ಸಾಕಷ್ಟು ಜನರಿಗೆ ಪೌಷ್ಟಿಕ ಆಹಾರದ ಕೊರತೆ ಹಾಗೂ ಅನಾರೋಗ್ಯದ ಸಮಸ್ಯೆಗಳಿವೆ. ಇವರು ಬಳಸುತ್ತಿದ್ದ ನಾಟಿ ಔಷಧಿಯ ಬಳಕೆ ಕಡಿಮೆ ಆಗಿದ್ದು, ಇಂಗ್ಲೀಷ್ ಮೆಡಿಸನ್‌ಗೆ ಮೊರೆ ಹೋಗುತ್ತಿದ್ದಾರೆ. ಶೈಕ್ಷಣಿವಾಗಿ ಇವರು ಪ್ರಾಥಮಿಕ ಶಿಕ್ಷಣಕಷ್ಟೇ ಸೀಮಿತವಾಗಿದ್ದು, ಬೆರಳೆಣಿಕೆಯಷ್ಟು ಮಂದಿ ಮಾತ್ರ ಮೆಟ್ರಿಕ್ ಮತ್ತು ಕಾಲೇಜು ಹಂತ ತಲುಪಿರುತ್ತಾರೆ. ಈ ಸಮುದಾಯದಲ್ಲಿ ಪಂಚಾಯಿತಿ ಸದಸ್ಯರಾಗಿ ಕೆಲವರು ಆಯ್ಕೆ ಆದರೂ ಅಧಿಕಾರ ಚಲಾವಣೆ ಮುಖ್ಯವಾಹಿನಿ ಜನರಿಂದಲೇ ಆಗುತ್ತಿದೆ.

ಸೋಲಿಗ ಸಮುದಾಯದಲ್ಲಿ ಮೊದಲಿಗೆ ಲಿಂಗ ಸಮಾನವಾದ ದೃಷ್ಟಿಕೋನವಿತ್ತು. ಇತ್ತೀಚೆಗೆ ಪುರುಷ ಪ್ರಧಾನ ಮೌಲ್ಯಗಳು ನಿಧಾನವಾಗಿ ಪ್ರವೇಶಿಸುತ್ತಿವೆ. ಇವರಲ್ಲಿ ಮದುವೆ ಮತ್ತು ವಿಚ್ಛೇದನಕ್ಕೆ ಸಂಬಂಧಿಸಿದಂತೆ ಗಂಡು ಮತ್ತು ಹೆಣ್ಣಿಗೆ ಮುಕ್ತ ಅವಕಾಶವಿದ್ದು, ವಿಧವಾ ವಿವಾಹ ಕೂಡ ನಡೆಯುತ್ತಿವೆ. ಹಿಂದೆ ಗಂಡು ಹೆಣ್ಣು ಒಪ್ಪಿ ಕಾಡಿನಲ್ಲಿ ಎರಡು ದಿನ ಇದ್ದು ಬಂದರೆ, ಹಿರಿಯರು ಮತ್ತು ಯಜಮಾನರು ಒಪ್ಪಿ ಐದು ಕೊಂಬಿನ ಅರಿಶಿಣದ ಕೊನೆ ಮತ್ತು ದಡಸಲ ಹಂಬಿನ ತಾಳಿಯನ್ನು ಹುಡುಗಿಯ ಕತ್ತಿಗೆ ಕಟ್ಟಿಸಿ ಮದುವೆ ಮಾಡುತ್ತಿದ್ದರು. ರೊಟ್ಟಿ ಹಬ್ಬದ ಸಂದರ್ಭದಲ್ಲಿ ಈ ರೀತಿಯ ಮದುವೆಗಳು ಬಿಳಿಗಿರಿ ರಂಗನ ಬೆಟ್ಟ, ಬೇಡಗುಳಿ ಪ್ರದೇಶಗಳಲ್ಲಿ ಕಂಡುಬರುತ್ತಿದ್ದವು. ಆದರೆ ಇತ್ತೀಚಿನ ವರ್ಷಗಳಲ್ಲಿ ಈ ರೀತಿಯ ಮದುವೆ ಪದ್ಧತಿ ಕಡಿಮೆ ಆಗುತ್ತಿರುವುದಾಗಿ ಹಿರಿಯರು ತಿಳಿಸುತ್ತಾರೆ. ಪುಣಜನೂರು ಭಾಗದ ಸೋಲಿಗರು ನಾಡಗುಡಿ ಹಳ್ಳಿ ಸಂಪರ್ಕಕ್ಕೆ ಬಂದ ಮೇಲೆ ಅವರ ಮದುವೆ ಪದ್ಧತಿ ಬದಲಾಗಿದ್ದು, ನಾಡಿನವರ ಹಾಗೆ ಶಾಸ್ತ್ರ ಕೇಳಿ ಲಗ್ನ ಕಟ್ಟಿಸಿ ಮನೆಯಲ್ಲಿ ಚಪ್ಪರ ಹಾಕಿ, ಧಾರೆ ಎರೆದು ಮದುವೆಗೆ ಬಂದವರಿಗೆ ಊಟ ಹಾಕುತ್ತಾರೆ. ಊಟ ಹಾಕಲು ಸಮಸ್ಯೆ ಇರುವವರು ಮಾತ್ರ ದೇವಸ್ಥಾನದಲ್ಲಿ ತಾಳಿ ಕಟ್ಟಿಸಿ ಐದಾರು ಮಂದಿಗೆ ಊಟ ಹಾಕುತ್ತಾರೆ. ಇವರಲ್ಲಿ ವರದಕ್ಷಣೆ ಇಲ್ಲವೇ ಇಲ್ಲ. ಗಂಡಿನ ಕಡೆ ಅನುಕೂಲವಿದ್ದು, ಹೆಣ್ಣಿನ ಕಡೆ ತೊಂದರೆ ಇದ್ದರೂ ಗಂಡು ಮದುವೆ ಮಾಡಿಕೊಳ್ಳುತ್ತಾನೆ. ಮದುವೆ ಸಂದರ್ಭದಲ್ಲಿ ವಿಶೇಷವಾಗಿ ಸೋಬಾನೆ ಪದಗಳನ್ನು ಹಾಡುವುದು ರೂಢಿಯಲ್ಲಿದೆ. ಕೆಲವೊಮ್ಮೆ ಗಂಡೊಪ್ಪಿದ ಹೆಣ್ಣು ಮತ್ತು ಹೆಣೊಪ್ಪಿದ ಗಂಡು ಜೊತೆ ಸೇರಿದರೆ ಅವರ ಕುಲದಲ್ಲಿ ನ್ಯಾಯ ಮಾಡಿ ಅವರು ಬಾಳ್ವೆ ನಡೆಸಲು ಬಿಡುತ್ತಾರೆ. ೨೦೧೧ರ ಸುತ್ತೂರು ಜಾತ್ರೆಯ ಸಾಮೂಹಿಕ ವಿವಾಹದಲ್ಲಿ ಬಾನವಾಡಿ, ಗೋಡೆಮಡುವಿನಲ್ಲಿ ತಲಾ ಒಂದೊಂದು, ಮುನೇಶ್ವರ ಕಾಲೋನಿಯಲ್ಲಿ ೫ ಮದುವೆಗಳಾಗಿವೆ. ಈ

ಸಂದರ್ಭದಲ್ಲಿ ಮದುವೆ ಖರ್ಚಿಗೆ ೧೦ ಸಾವಿರ ರೂಪಾಯಿಗಳ ಆರ್ಥಿಕ ನೆರವು, ಹುಡುಗ, ಹುಡುಗಿಗೆ ಒಂದೊಂದು ಜೊತೆ ಬಟ್ಟೆ ಮತ್ತು ತಾಳಿಯನ್ನು ಉಚಿತವಾಗಿ ನೀಡಿರುತ್ತಾರೆ.

ಸೋಲಿಗರು ಪ್ರಕೃತಿ ಕೊಡುಗೆಯಾದ ಮರಗಿಡಗಳನ್ನು (ದೊಡ್ಡ ಸಂಪಿಗೆ ಮತ್ತು ಚಿಕ್ಕ ಸಂಪಿಗೆ ಮರಗಳು) ಪೂಜಿಸುತ್ತಿದ್ದು, ಜಡೇಸ್ವಾಮಿ, ಹಾಸನೂರು ಮತ್ತು ಕೋಣನೂರು ಕುಂಭೇಶ್ವರ, ಮುನೇಶ್ವರ ದೇವರ ಹಬ್ಬ ಮತ್ತು ಜಾತ್ರೆಯನ್ನು ಮಾಡುತ್ತಾರೆ. ಬಿಳಿಗಿರಿರಂಗನ ಬೆಟ್ಟದ ಜಾತ್ರೆ ಹಾಗೂ ರೊಟ್ಟಿ ಹಬ್ಬದಲ್ಲಿ 'ಗೊರು ಗೊರುಕ ಗೊರುಕನಾ...' ಹಾಡಿಗೆ ರಾತ್ರಿ ಪೂರ ಲಿಂಗಬೇಧ ಮತ್ತು ವಯಸ್ಸಿನ ಅಂತರವಿಲ್ಲದೆ ಎಲ್ಲರೂ ಕುಣಿಯುತ್ತಾರೆ. ಈ ಹಬ್ಬದಲ್ಲಿ ಮಾಡುವ ರೊಟ್ಟಿ, ಮುದ್ದೆ, ಅವರೆ ಕಾಳು ವಿಶೇಷವಾಗಿರುತ್ತವೆ. ಇವರಿಗೆ ಬಿಳಿಗಿರಿ ರಂಗನ ಬೆಟ್ಟದಲ್ಲಿರುವ ದೊಡ್ಡಸಂಪಿಗೆ ಮರ ಪವಿತ್ರವಾದ ಸ್ಥಳವಾಗಿದ್ದು, ಅಲ್ಲಿಗೆ ಭೇಟಿ ಮಾಡಿ ಪೂಜೆ ಸಲ್ಲಿಸುತ್ತಾರೆ. ಅಲ್ಲದೆ ಸೋಲಿಗರಲ್ಲಿ ಸಂಕ್ರಾಂತಿ ಹಬ್ಬ ಮುಖ್ಯವಾಗಿದ್ದು ತಮ್ಮ ಹಿರಿಯರಿಗೆ ಎಡೆ ಹಾಕಿ ಪೂಜಿಸುತ್ತಾರೆ. ಇವರಲ್ಲಿ ಸಂಘಟನೆಯ ಕೊರತೆಯಿದ್ದು, ಹಬ್ಬ, ಜಾತ್ರೆಗಳ ಸಂದರ್ಭದಲ್ಲಿ ಕುಡಿತದ ಪ್ರಮಾಣ ಹೆಚ್ಚಾಗಿದ್ದು, ಇವರ ಹಬ್ಬ-ಜಾತ್ರೆಗಳಲ್ಲಿ ಮುಖ್ಯವಾಹಿನಿಯವರ ಪ್ರಭಾವವು ಕಂಡುಬರುತ್ತದೆ.

**ಲಂಬಾಣಿ ಸಮುದಾಯ :**

ಲಂಬಾಣಿ ಸಮುದಾಯವು ಪುಣಜನೂರು ಪಂಚಾಯಿತಿಯ ಕೋಳಿಪಾಳ್ಯ, ಮೂಕನಪಾಳ್ಯ, ಬೆಜ್ಜಲಪಾಳ್ಯ, ವೀರಯ್ಯನಪುರ, ರಂಗಸಂದ್ರ (ಬೂದಿಪಡಗ), ದೊಡ್ಡಮೂಡಳ್ಳಿ, ಎತ್ತೇಗೌಡನದೊಡ್ಡಿ ಗ್ರಾಮಗಳಲ್ಲಿ ವಾಸವಾಗಿದ್ದಾರೆ. ವ್ಯವಸಾಯ ಮುಖ್ಯ ಕಸುಬಾದರೂ, ಕೂಲಿಗಾಗಿ ತಮಿಳುನಾಡು, ಕೇರಳ, ಬೆಂಗಳೂರು ಕಡೆ ಹೆಚ್ಚು ವಲಸೆ ಹೋಗುತ್ತಿದ್ದಾರೆ. ವಲಸೆ ಹೋಗುವವರಲ್ಲಿ ಯುವ ಜನರ ಸಂಖ್ಯೆ ಹೆಚ್ಚಾಗಿದೆ. ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಇವರು ಇತರೆ ಸಮುದಾಯಗಳಿಗಿಂತ ಉತ್ತಮವಾಗಿದ್ದಾರೆ. ಈ ಸಮುದಾಯದಲ್ಲಿ ವಿದ್ಯಾವಂತ ಯುವ ಜನರು, ಉನ್ನತ ಹುದ್ದೆಯಲ್ಲಿರುವ ಸರ್ಕಾರಿ ನೌಕರರು, ಜನಪ್ರತಿನಿಧಿಗಳು ಹೆಚ್ಚಾಗಿ ಕಂಡು ಬರುತ್ತಾರೆ. ಈ ಸಮುದಾಯದಲ್ಲಿ ಮೊದಲಿನಿಂದಲೂ ಗಂಡು ಮಕ್ಕಳಿಗೆ ಇರುವಷ್ಟು ಶಿಕ್ಷಣದ ಅವಕಾಶಗಳು ಹೆಣ್ಣು ಮಕ್ಕಳಿಗೆ ಇಲ್ಲ. ಕಳೆದ ೫-೬ ವರ್ಷಗಳ ಹಿಂದೆ ಹೆಣ್ಣು ಮಕ್ಕಳ ಮದುವೆ ೭-ಲನೇ ತರಗತಿಗೆ ಆಗುತ್ತಿತ್ತು. ಆದರೆ ಕೋಳಿಪಾಳ್ಯದಲ್ಲಿ ಪ್ರೌಢಶಾಲೆ ಆರಂಭಗೊಂಡ ನಂತರ ಮದುವೆಯ ವಯಸ್ಸು ಮೆಟ್ರಿಕ್ ಹಂತದವರೆಗೆ ಮುಂದೂಡಲ್ಪಟ್ಟಿದೆ.

ಲಂಬಾಣಿ ಸಮುದಾಯದಲ್ಲಿ ಹಿಂದೆ ಹೆಣ್ಣು ಮಕ್ಕಳಿಗೆ ಒಪ್ಪಿಗೆ ಇರಲಿ, ಇಲ್ಲದಿರಲಿ ತಂದೆ ತಾಯಿ ಒಪ್ಪಿ ೧೨-೧೩ ವರ್ಷಕ್ಕೆ ಮದುವೆ ಮಾಡುತ್ತಿದ್ದರು. ಮದುವೆಗೆ ಮುದ್ದೆ, ಅವರೆಕಾಳು ಸಾಂಬಾರು, ಅನ್ನದ ಹೊರತಾಗಿ ಬೇರೆ ಏನೂ ಇರುತ್ತಿರಲಿಲ್ಲ. ಹಿಂದೆ ಗಂಡಿನ ಮನೆಯವರು ಮದುವೆ ಮಾಡಿಕೊಳ್ಳುತ್ತಿದ್ದರು. ಈಗ ನಡೆಯುತ್ತಿರುವ ಮದುವೆಗಳಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳಿಬ್ಬರ ಒಪ್ಪಿಗೆಯನ್ನು ಪರಿಗಣಿಸಲಾಗುತ್ತದೆ. ಮದುವೆಯ ಖರ್ಚನ್ನು ಗಂಡು ಹೆಣ್ಣಿನ ಕಡೆಯವರಿಬ್ಬರು ಸಮವಾಗಿ ಹಾಕಿ

ಹುಡುಗಿ ಮನೆಯಲ್ಲಿ ಮದುವೆ ಮಾಡುವುದು ಸಾಮಾನ್ಯವಾಗಿದೆ. ಇವರಲ್ಲಿ ವರದಕ್ಷಿಣೆ ಪದ್ಧತಿ ರೂಢಿಯಲಿಲ್ಲದಿದ್ದರೂ, ಇತ್ತೀಚಿನ ದಿನಗಳಲ್ಲಿ ಕೆಲವರು ಒಡವೆ ರೂಪದಲ್ಲಿ ಚಿನ್ನವನ್ನು ನೀಡುತ್ತಿದ್ದಾರೆ. ಆದರೆ ಕೊಡಲೇಬೇಕೆಂಬ ನಿಯಮವೇನು ಇಲ್ಲ. ಇವರಲ್ಲಿ ಮದುವೆ ಹಿಂದೆ ಮೂರು ದಿನಗಳು ನಡೆಯುತಿತ್ತು. ಈಗ ಎರಡು ದಿನಗಳಲ್ಲಿ ಮುಗಿಯುತ್ತಿದೆ. ಮನೆಯಲ್ಲಿ ಚಪ್ಪರ ಹಾಕಿ, ಮಡಕೆ ಶಾಸ್ತ್ರ, ನೀರಿನಶಾಸ್ತ್ರ, ಕಂಕಣಶಾಸ್ತ್ರ ಹಾಗೂ ಧಾರೆ ಮಾಡುತ್ತಾರೆ. ಇತ್ತೀಚಿಗಷ್ಟೇ ಹಣಕಾಸು ಇರುವವರು ಕಲ್ಯಾಣ ಮಂಟಪದಲ್ಲಿ ಮದುವೆ ಮಾಡುತ್ತಿದ್ದು, ಊಟ, ತಿಂಡಿಯಲ್ಲೂ ಬದಲಾವಣೆಗಳು ಕಂಡು ಬಂದಿವೆ. ಹಿಂದೆ ಇವರಲ್ಲಿ ಅಷಾಡಮಾಸಕ್ಕೆ ಹೆಣ್ಣು ಮಕ್ಕಳನ್ನು ತವರಿಗೆ ಕಳುಹಿಸುವ ಪದ್ಧತಿ ಇರಲಿಲ್ಲ. ಈಗಿನವರು ಕಳುಹಿಸುವ ರೂಢಿ ಮಾಡಿಕೊಂಡಿದ್ದಾರೆ. ಇವರಲ್ಲಿ ಅಂತರ್ಜಾತಿ ವಿವಾಹ ನಿಷಿದ್ಧವಾಗಿದೆ. ಹಾಗೊಂದು ವೇಳೆ ಬೇರೆ ಜಾತಿ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಂಡು ಬಂದರೆ ಸಹಿಸುವುದಿಲ್ಲ. ಅಂತಹವರನ್ನು ಕಂಬಕ್ಕೆ ಕಟ್ಟಿ ತಲೆ ಬೋಳಿಸಿ, ದಂಡ ಹಾಕಲಾಗುತ್ತದೆ. ಒಂದು ವೇಳೆ ಲಿಂಗಾಯಿತರು, ಈಡಿಗರು, ನಾಯಕ ಹಾಗೂ ಸೋಲಿಗರ ಹೆಣ್ಣು ಮಕ್ಕಳನ್ನು ಕಟ್ಟಿಕೊಂಡು ಬಂದಲ್ಲಿ ಯಾವುದೇ ಸಮಸ್ಯೆ ಇಲ್ಲ.

ಲಂಬಾಣಿ ಸಮುದಾಯದ ವಿಶೇಷತೆ ಎಂದರೆ ಅವರ ಸಾಂಪ್ರದಾಯಿಕ ಉಡುಗೆ-ತೊಡಿಗೆ ಹಾಗೂ ಹಾಡು ಕುಣಿತಗಳು. ಇವರ ಸಾಂಪ್ರದಾಯಿಕ ಉಡುಪುಗಳನ್ನು ಸಿದ್ಧಪಡಿಸಲು ಸಮಯ ಮತ್ತು ಖರ್ಚು ಹೆಚ್ಚಾಗಿದ್ದು, ಆಧುನಿಕ ಉಡುಪುಗಳಲ್ಲಿರುವ ಸರಳತೆ ಇಲ್ಲದಿರುವುದು ಹಾಗೂ ಅವರ ಉಡುಪಿನ ಬಗ್ಗೆ ಸಮಾಜ ಪ್ರತ್ಯೇಕವಾಗಿ ನೋಡುತ್ತದೆ ಎಂಬ ಕೀಳರಿಮೆಯ ಭಾವನೆಯಿಂದ ಅವರ ಸಾಂಪ್ರದಾಯಿಕ ಉಡುಗೆ-ತೊಡಿಗೆಗಳ ಬಳಕೆ ಕಾಣೆಯಾಗುತ್ತಿದೆ. "ಹಿಂದೆ ನಮ್ಮ ಮಹಿಳೆಯರು ಸಾಂಪ್ರದಾಯಿಕ ಉಡುಗೆಯಾದ 'ಕೌದಿ'ಯನ್ನು



ಹಾಕುತ್ತಿದ್ದರು. ಈಗ ಮದುವೆ ದಿನಗಳಲ್ಲೂ ನಮ್ಮ ಉಡುಗೆ-ತೊಡಿಗೆಯನ್ನು ಯಾರು ಹಾಕುತ್ತಿಲ್ಲ. ಪೇಟೆಗೆ ಹೋಗುವ ಜನ, ಆಫೀಸರ್‌ಗಳ ಹೆಂಡತಿಯರು ಪ್ಯಾಟೆ (ಪಟ್ಟಣ) ತರಹದ ಡ್ರಸ್ (ಉಡುಗೆ-ತೊಡಿಗೆ) ಹಾಕಿಕೊಳ್ಳುತ್ತಾರೆ. ನಾವು ಹಾಕುವ ಡ್ರಸ್‌ಗಳನ್ನು ನೋಡಿ ಅಸಹ್ಯಪಡುತ್ತಾರೆ. ಆದರೆ ತಿರುಪತಿಗೆ ಹೋದಾಗ ನಮ್ಮ ಡ್ರಸ್ ನೋಡಿ ಪೋಲಿಸನವರೇ ದೇವರು ನೋಡಲು ಜಾಗ ಬಿಡಿಸಿ ಕೊಡುತ್ತಾರೆ. ಹಿಂದೆ ಹಬ್ಬದ ದಿನಗಳಲ್ಲಿ ಎಲ್ಲರೂ ಸಾಮೂಹಿಕವಾಗಿ ನಮ್ಮ ಲಂಬಾಣಿ ಡ್ರೆಸ್ ಹಾಕಿಕೊಂಡು ಹಾಡಿ ಕುಣಿದರೆ ಚೆನ್ನಾಗಿ ಕಾಣುತಿತ್ತು. ಈಗ ಒಬ್ಬರು, ಇಬ್ಬರು ಲಂಬಾಣಿ ಡ್ರೆಸ್ ಹಾಕಿಕೊಂಡು, ಉಳಿದವರು ಸೀರೆ ಹಾಕಿಕೊಂಡು ಕುಣಿದರೆ ಚನ್ನಾಗಿ ಕಾಣಿಸುವುದಿಲ್ಲ. ಆದ್ದರಿಂದ ನಾವೆಲ್ಲಾ ಸಾಮಾನ್ಯವಾಗಿ ಸೀರೆಯನ್ನು ಹಾಕಿಕೊಂಡು ಹಾಡಿ ಕುಣಿಯುತ್ತೇವೆ. ಮೊದಲಿನ ಹಾಗೇ ಬಟ್ಟೆ ಹೊಲಿಯಲು ಸಾಕಷ್ಟು ಸಮಯವಿಲ್ಲ.

ಆದರೆ ಈಗ ನಮ್ಮ ಜಾತಿಯವರನ್ನು ಸೇರಿಸಿ ತರಬೇತಿ ನೀಡಲಾಗುತ್ತಿದ್ದು, ಅದಕ್ಕೆ ನಾನೇ ಸಂಪನ್ಮೂಲ ವ್ಯಕ್ತಿಯಾಗಿದ್ದೇನೆ. ನನಗೆ ತಿಂಗಳಿಗೆ ೩೦೦೦ ರೂಪಾಯಿಗಳನ್ನು ಗೌರವಧನವಾಗಿ ಕೊಡುತ್ತಾರೆ" ಎಂಬುದಾಗಿ ಕೋಳಿಪಾಳ್ಯದ ತೊಳಚಮ್ಮಬಾಯಿ ತಿಳಿಸಿದ್ದಾರೆ.

ಲಂಬಾಣಿ ಸಮುದಾಯದಲ್ಲಿ ಕುಂಭೇಶ್ವರ, ಲಕ್ಷ್ಮಿದೇವಿ, ತೊಳಚಮ್ಮ, ದಂಡಿನ ಮಾರಮ್ಮ ದೇವತೆಗಳನ್ನು ಆರಾಧಿಸುತ್ತಾರೆ. ದೀಪಾವಳಿ ಹಬ್ಬವನ್ನು ಪ್ರತಿ ವರ್ಷ ಬಹಳ ವಿಜೃಂಭಣೆಯಿಂದ ೪ ದಿನಗಳವರೆಗೆ ಆಚರಿಸುತ್ತಾರೆ. ಈ ಹಬ್ಬದಲ್ಲಿ ವಿಶೇಷವಾಗಿ ದಿನ ಬಿಟ್ಟು ದಿನ ಸಿಹಿ ಮತ್ತು ಮಾಂಸಾಹಾರ ಊಟ ಇದ್ದು, ಕೊನೆ ದಿನ ಸತ್ತವರಿಗೆ ಪೂಜೆ ಮಾಡಿ ಎಡೆ ಹಾಕುತ್ತಾರೆ. ಪ್ರತಿ ವರ್ಷ ಮಾರ್ಚ್ ತಿಂಗಳಲ್ಲಿ ಲಂಬಾಣಿ ಸಮುದಾಯ ವಾಸಿಸುವ ಪ್ರತಿ ಗ್ರಾಮದಲ್ಲೂ ವಾರಕ್ಕೆ ಒಂದು ಗ್ರಾಮದಲ್ಲಿ ಮೂರರಿಂದ ಐದು ದಿನಗಳ ಕಾಲ ಲಕ್ಷ್ಮೀದೇವಿ ಜಾತ್ರೆಯನ್ನು ಮಾಡುತ್ತಾರೆ. ಈ ಹಬ್ಬದಲ್ಲಿ ಕೊಂಡ ಹಾಯುವುದು, ಹಾಡು ಮತ್ತು ಕುಣಿತಗಳು ವಿಶೇಷವಾಗಿ ಕಂಡು ಬರುತ್ತವೆ. ಇತ್ತೀಚಗಷ್ಟೇ ಆರ್ಕೆಸ್ಟ್ರಾದ ಪ್ರಭಾವಕ್ಕೆ ಒಳಗಾಗಿದ್ದಾರೆ. ಗೌರಿಗಣೇಶ, ಸಕ್ರಾಂತಿ, ಯುಗಾದಿ ಹಬ್ಬಗಳನ್ನು ಸಾಮಾನ್ಯವಾಗಿ ಆಚರಿಸುತ್ತಾರೆ.

**ಮುಸ್ಲಿಂ ಸಮುದಾಯ :**

ಪುಣಜನೂರುಗೇಟ್, ಕೋಳಿಪಾಳ್ಯ ಮತ್ತು ಕುಳ್ಳೂರು ಗ್ರಾಮಗಳಲ್ಲಿ ಮುಸ್ಲಿಂ ಸಮುದಾಯದ ಸುಮಾರು ೪೦ ಕುಟುಂಬಗಳು ವಾಸವಾಗಿದ್ದು, ಶ್ರೀನಿವಾಸಪುರ ಮತ್ತು ಮುನೇಶ್ವರ ಕಾಲೋನಿಯಲ್ಲಿ ಎರಡು ಕುಟುಂಬಗಳಿವೆ. ಇವರು ಮೂಲತಃ ಚಾಮರಾಜನಗರ, ಕಾಗಲವಾಡಿ, ಕೌದಳ್ಳಿ, ಮೈಸೂರು ಮುಂತಾದ ಕಡೆಯಿಂದ ಬಂದವರಾಗಿದ್ದಾರೆ. ಇವರಲ್ಲಿ ಪಠಾಣ್, ವಹಾಬಿ, ರಾಹುತ್, ಶೇಕ್‌ದಾವತ್, ಶಬಾಬ್, ಸೈಯ್ಯದ್ ಮುಂತಾದ ಕುಲಗಳಿವೆ. ಇವರಲ್ಲಿ ೨-೩ ಕುಟಂಬಗಳಿಗೆ ಭೂಮಿ ಇದ್ದರೂ ಭಾಗಾಚಾರದ ವಿಷಯವಾಗಿ ತಕರಾರು ಇದ್ದು, ವ್ಯವಸಾಯ ಮಾಡಲು ಸಾಧ್ಯವಾಗದೆ ಕೋರ್ಟಿನಲ್ಲಿ ವ್ಯಾಜ್ಯ ಇದೆ. ಉಳಿದ ಕುಟುಂಬದವರು ಅಂಗಡಿ ಮತ್ತು ಹೋಟೆಲ್ ವ್ಯಾಪಾರ, ಟೇಲರಿಂಗ್, ಮೆಕಾನಿಕ್ ಹಾಗೂ ಡ್ರೈವಿಂಗ್ ಕೆಲಸ ಮಾಡುತ್ತಿದ್ದಾರೆ. ಈ ಸಮುದಾಯದಲ್ಲಿ ಇತ್ತೀಚಿಗೆ ಗಂಡು ಮತ್ತು ಹೆಣ್ಣು ಮಕ್ಕಳು ಪ್ರೌಢಶಾಲಾ ಶಿಕ್ಷಣ ಪಡೆಯುತ್ತಿದ್ದಾರೆ. ಪ್ರಸ್ತುತ ಪುಣಜನೂರಿನ ಒಬ್ಬ ಯುವಕ ಬಿ.ಎಡ್ ಮಾಡುತ್ತಿದ್ದು, ಯುವತಿ ಡಿ.ಎಡ್ ವ್ಯಾಸಂಗ ಮಾಡಿರುತ್ತಾರೆ. ಈ ಸಮುದಾಯದ ಮಹಿಳೆಯರು ಸ್ತ್ರೀ ಶಕ್ತಿ ಸ್ವ-ಸಹಾಯ ಸಂಘದ ಸದಸ್ಯರಾಗಿ ಸೌಲಭ್ಯಗಳನ್ನು ಪಡೆಯುತ್ತಿದ್ದು, ಕೆಲವು ಮಹಿಳೆಯರು ಟೇಲರಿಂಗ್ ತರಬೇತಿ ಕೂಡ ಪಡೆಯುತ್ತಿದ್ದಾರೆ. ಮಹಿಳೆಯರು ಬುರ್ಖಾ ಧರಿಸುವುದು ರೂಢಿಯಲ್ಲಿದೆ. ಕೋಳಿಪಾಳ್ಯ, ಪುಣಜನೂರು ಮತ್ತು ಕುಳ್ಳೂರಿನಲ್ಲಿ ಮಸೀದಿಗಳಿದ್ದು, ಇವರು ರಂಜಾನ್, ಬಕ್ರಿದ್ ಮುಂತಾದ ಹಬ್ಬಗಳನ್ನು ಆಚರಿಸುತ್ತಾರೆ. ಪ್ರತಿ ವರ್ಷ ಆಗಸ್ಟ್ ತಿಂಗಳಲ್ಲಿ ವಿಶೇಷವಾಗಿ 'ಶಬಾನ್' ಎಂಬ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬದಲ್ಲಿ ಸತ್ತವರಿಗೆ ಎಡೆ ಹಾಕಿ ಜಾಗರಣೆ ಮಾಡುತ್ತಾ ಕುರಾನ್ ಪಠಿಸುತ್ತಾರೆ.

**ಬಡಗ ಸಮುದಾಯ :**

ಬಡಗ ಸಮುದಾಯವು ಚಾಮರಾಜನಗರ ಜಿಲ್ಲೆಯ ಪುಣಜನೂರಿನಲ್ಲಿ ಮಾತ್ರ ಕಂಡು ಬರುತ್ತಿದ್ದು, ಇವರ ಮೂಲ ಸ್ಥಾನ ಊಟಿಯಾಗಿದೆ. ಪುಣಜನೂರಿನಲ್ಲಿ ಸುಮಾರು ೫೦ ರಿಂದ ೫೫ ಕುಟುಂಬಗಳಿದ್ದು, ಇವರಲ್ಲಿ ಕುಕುಲ, ಕಡನಾಡು, ತೊದನಾಡು ಹಾಗೂ ಆರೂರು ಎಂಬ ನಾಲ್ಕು ಕುಲಗಳಿವೆ. ಆರೂರು ಕುಲದವರು ಸಸ್ಯಾಹಾರಿಗಳಾಗಿದ್ದು, ಉಳಿದ ಮೂರು ಕುಲದವರು ಮಾಂಸಾಹಾರಿಗಳು. ಮನೆಯಲ್ಲಿ ಎಲ್ಲರೂ ಬಡಗ ಭಾಷೆ ಮಾತನಾಡುತ್ತಿದ್ದು, ಹೊರಗಿನ ಸಂಪರ್ಕ ಹಾಗೂ ವ್ಯವಹಾರಕ್ಕಾಗಿ ಕನ್ನಡ, ತಮಿಳು ಮಾತನಾಡುತ್ತಾರೆ. ಹೆಚ್ಚಿನವರಿಗೆ ಭೂಮಿ ಇದ್ದು ಜೋಳ ಸಜ್ಜೆ, ರಾಗಿ, ಆಲೂಗಡ್ಡೆ, ಬೀನ್ಸ್, ಅರಿಶಿನ, ಭತ್ತ ಹಾಗೂ ಕಬ್ಬು ಬೆಳೆಯುತ್ತಾರೆ. ವ್ಯವಸಾಯದ ಸಂದರ್ಭದಲ್ಲಿ ತಮ್ಮ ಭೂಮಿಯಲ್ಲಿ ದುಡಿದು, ಸುತ್ತಮುತ್ತಲ ಪ್ರದೇಶ, ಬೇಡಗುಳಿ ಎಸ್ಟೇಟ್‌ಗಳಿಗೆ ದುಡಿಯಲು ಹೋಗುತ್ತಾರೆ. ಇವರಲ್ಲಿ ಹೆಚ್ಚಿನವರು ಶಿಕ್ಷಣ ಪಡೆದಿಲ್ಲ. ಗಂಡು ಮಕ್ಕಳಿಗೆ ಹೆಚ್ಚು ಶಿಕ್ಷಣ ಪಡೆಯುವ ಅವಕಾಶವಿದ್ದು, ಹೆಣ್ಣು ಮಕ್ಕಳು ಮೆಟ್ರಿಕ್ ವರೆಗೆ ಶಿಕ್ಷಣ ಪಡೆಯುತ್ತಿದ್ದಾರೆ. ಪ್ರಸ್ತುತ ಈ ಸಮುದಾಯದಲ್ಲಿ ಒಬ್ಬ ಯುವಕ ಬಿ.ಎಡ್, ಮತ್ತೊಬ್ಬ ಯುವಕ ಸಮಾಜಕಾರ್ಯ (ಬಿಎಸ್‌ಡಬ್ಲ್ಯೂ) ಪದವಿಗಳನ್ನು ಪಡೆದಿದ್ದಾರೆ.

ಇತರೆ ಸಮುದಾಯಗಳಂತೆ ಇವರಲ್ಲಿ ಮದುವೆಗಾಗಿ ಗಂಡಿನ ಮನೆಯವರು ಹೆಣ್ಣು ನೋಡುತ್ತಾರೆ. ಆ ನಂತರ ನಿಶ್ಚಿತಾರ್ಥ ಮಾಡಿ ಗಂಡಿನ ಮನೆಯಲ್ಲಿ ಮದುವೆ ಮಾಡುತ್ತಾರೆ. ಮದುವೆ ಸಂದರ್ಭದಲ್ಲಿ ಧಾರೆ ಎರೆಯುವುದಿಲ್ಲ. ಬದಲಾಗಿ ಗಂಡು ಹೆಣ್ಣಿಗೆ ಜನಿವಾರವನ್ನು ಹೋಲುವ ರೀತಿಯಲ್ಲಿ ಒಂದು ದಾರವನ್ನು ಕಟ್ಟುವುದು, ಅನ್ನ ಮತ್ತು ಹಾಲನ್ನು ಒಂದು ತಟ್ಟೆಯಲ್ಲಿ ಇಟ್ಟು, ಗಂಡು ಹೆಣ್ಣು ಇಬ್ಬರ ಕೈಗಳಿಂದ ಮುಟ್ಟಿಸಿದ ನಂತರ ತಾಳಿ ಕಟ್ಟಿಸುತ್ತಾರೆ. ವಧು-ವರರಿಗೆ ತಲೆಯ ಮೇಲೆ ಅಕ್ಷತೆ ಕಾಳನ್ನು ಹಾಕುವುದಿಲ್ಲ. ಹಣೆಯ ಮೇಲೆ ಸ್ವಲ್ಪ ಅಕ್ಷತೆ ಅಂಟಿಸುತ್ತಾರೆ. ಇವರಲ್ಲಿ ವರದಕ್ಷಣೆ ರೂಢಿಯಲಿಲ್ಲ. ಹೆಣ್ಣಿನ ಮನೆಯವರ ಖರ್ಚನ್ನು ಹೆಣ್ಣಿನ ಮನೆಯವರು ನೋಡಿಕೊಳ್ಳುತ್ತಾರೆ. ಗಂಡಿನ ಮನೆಯವರು ಹೆಣ್ಣಿಗೆ ಒಡವೆ ಮಾಡಿಸಿ ಹಾಕುತ್ತಾರೆ. ಆದರೆ ಗಂಡಿನ ಮನೆಯವರು ಹೆಣ್ಣಿಗೆ ತಾಳಿ ಮತ್ತು ಕಾಲುಂಗುರ ಮಾತ್ರ ಮಾಡಿಸುವುದಿಲ್ಲ. ಹೆಣ್ಣಿನ ಮನೆಯವರು ಅನುಕೂಲಸ್ಥರಾಗಿದ್ದಲ್ಲಿ ಗಂಡಿನ ಕಡೆಯವರು ಮೋಟಾರ್ ಬೈಕ್, ಚಿನ್ನ ಕೇಳಿದರೆ ಮದುವೆ ನಂತರ ಕೊಡಿಸುತ್ತಾರೆ. ಉಳಿದಂತೆ ಗಂಡಿನ ಕಡೆಯವರು ತಮ್ಮ ಖರ್ಚನ್ನು ತಾವೇ ನೋಡಿಕೊಳ್ಳುತ್ತಾರೆ. ಮದುವೆಯಲ್ಲಿ ಶೋಬಾನೆ ಪದಗಳೇನೂ ಹಾಡುವುದಿಲ್ಲ. ಆದರೆ ಧ್ವನಿ ವರ್ಧಕಗಳ ಮೂಲಕ ಬಡಗ ಸಮುದಾಯದ ಹಾಡಿನ ಕ್ಯಾಸೆಟ್‌ಗಳನ್ನು ಹಾಕಿ ಕುಣಿಯುತ್ತಾರೆ. ಪುಣಜನೂರಿನ ಬಡಗ ಸಮುದಾಯದಲ್ಲಿ ಅಂತರ್ ಜಾತಿ ವಿವಾಹಗಳು ಒಂದೂ ನಡೆದಿರಲಿಲ್ಲ. ಇತ್ತೀಚೆಗಷ್ಟೇ ಒಂದು ಹುಡುಗಿ ನಾಯಕ ಜನಾಂಗದ ಹುಡುಗನ ಜೊತೆ ಮದುವೆ ಆಗಿದ್ದು ಅವಳನ್ನು ಮನೆಗೆ ಸೇರಿಸಲಿಲ್ಲ. ಕಳೆದ ತಿಂಗಳು ಅವಳ ಅಜ್ಜಿ ತೀರಿಕೊಂಡಾಗಲೂ ಆಕೆ ಬರಲಿಲ್ಲ. ಈ ರೀತಿಯ ಅಂತರ್ಜಾತಿಯ ವಿವಾಹಗಳು ಊಟಿಯಲ್ಲಿ ನಡೆಯುತ್ತಿವೆ. ಈ ರೀತಿ ವಿವಾಹವಾದವರನ್ನು ಬಡಗ ಸಮುದಾಯದಲ್ಲಿ ಸೇರಿಸದಿರುವ ಕಾರಣ ಅವರು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದುತ್ತಾರೆ ಎಂದು ಸಮುದಾಯದವರು ತಿಳಿಸಿರುತ್ತಾರೆ.

ಬಡಗ ಸಮುದಾಯದಲ್ಲಿ ಪಟೇಲರು, ಗೌಡಿಕೆಯವರು ಮುಖ್ಯವಾಗಿದ್ದು, ಜನಾಂಗದ ವಿಚಾರಗಳು, ಹಬ್ಬ, ಮದುವೆ ಮುಂತಾದ ಕಾರ್ಯಕ್ರಮಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಪಟೇಲ ಮತ್ತು ಗೌಡಿಕೆ ಪದ್ಧತಿ ವಂಶ ಪಾರಂಪರ್ಯವಾಗಿ ನಡೆದು ಬರುತ್ತಿದೆ. ಇವರು ಮುಖ್ಯವಾಗಿ ಆಚರಿಸುವ ಹಬ್ಬ 'ಎತ್ತಿಯಮ್ಮನ್ ಹಬ್ಬ'. ಈ ಹಬ್ಬವನ್ನು ಪ್ರತಿ ವರ್ಷ ಜನವರಿ ತಿಂಗಳಲ್ಲಿ ಮೂರು ದಿನ ಆಚರಿಸುತ್ತಾರೆ. ಈ ಹಬ್ಬದಲ್ಲಿ ಪುರುಷರು ಬಿದಿರು ಮತ್ತು ಗಂಧಧ ಮರದ ತುಂಡುಗಳಿಂದ ದೇವರು ಮಾಡಿ, ಸೀರೆ ಉಡಿಸಿ ನೀಲಿ ಮತ್ತು ಹಸಿರು ಕೊಡೆಗಳನ್ನು ಹಿಡಿದು ಹೊಳೆಯಿಂದ ಮಡಿ ಮಾಡಿಸಿ ತರುತ್ತಾರೆ. ದೇವಿಯನ್ನು ನೋಡುವ ಪುರುಷರು ಬಿಳಿ ಶರ್ಟ್ ಮತ್ತು ಬಿಳಿ ಪಂಚೆ ಹಾಕಿಕೊಂಡು ನೋಡಬೇಕೆಂಬ ಸಂಪ್ರದಾಯವಿದ್ದು, ಹೆಂಗಸರು ದೂರದಿಂದಲೇ ನೋಡಬೇಕು. ಹಬ್ಬದಲ್ಲಿ ಸಿಹಿ ಮತ್ತು ಖಾರದ ತಿಂಡಿ ತಿನಿಸುಗಳನ್ನು ಮಾಡುತ್ತಾರೆ. ಉಳಿದಂತೆ ಸಂಕ್ರಾಂತಿ, ಗೌರಿ, ಗಣೇಶ, ಯುಗಾದಿ ಹಬ್ಬಗಳನ್ನು ಆಚರಿಸುತ್ತಾರೆ. ಈ ಸಮುದಾಯದಲ್ಲಿ ಸತ್ತವರನ್ನು ಸ್ಮಶಾನದಲ್ಲಿ ಹೂಳುತ್ತಾರೆ. ನಂತರ ಸಮಾದಿಯ ಕಡೆ ತಿರುಗಿ ನೋಡುವುದಿಲ್ಲ. ೧೨ ದಿನಕ್ಕೆ ತಿಥಿ, ೧೬ ಅಥವಾ ೪೦ ದಿನಗಳಿಗೆ ಮಾಂಸದ ಊಟ ಮಾಡುತ್ತಾರೆ. ಸತ್ತವರಿಗೆ ಪೂಜೆ ಸಲ್ಲಿಸಬೇಕೆನ್ನುವವರು ತಮ್ಮ ಜಮೀನಿನಲ್ಲಿ ಹೂಳಿ, ಗೋರಿ ಕಟ್ಟಿಸಿ ಪೂಜಿಸುತ್ತಾರೆ. ಆದರೆ ವರ್ಷಕ್ಕೊಮ್ಮೆ ವ್ಯಕ್ತಿಯು ಸತ್ತ ದಿನದಂದು ಅವರ ಫೋಟೋ ಇಟ್ಟು ಪೂಜೆ ಸಲ್ಲಿಸುತ್ತಾರೆ.

## ಪುಣಜನೂರು ಪಂಚಾಯಿತಿ ವ್ಯಾಪ್ತಿಯ ಮಹಿಳೆಯರ ಸ್ಥಿತಿ

ಪುಣಜನೂರು ಪಂಚಾಯಿತಿ ವ್ಯಾಪ್ತಿಯ ಹೆಚ್ಚಿನ ಹಳ್ಳಿಗಳಲ್ಲಿ ಮಹಿಳೆಯರು ಸಹ ಪುರುಷರಂತೆ ದುಡಿಯುವುದು ಸಾಮಾನ್ಯವಾಗಿದೆ. ಇತ್ತೀಚೆಗಷ್ಟೆ ಮದುವೆ ಆಗಿರುವಂತಹ ಲಂಬಾಣಿ ಯುವತಿಯರನ್ನು ಹೊರತುಪಡಿಸಿ ಬಹುತೇಕ ಜನರು ಸ್ಥಳೀಯವಾಗಿ ಹಾಗೂ ಹೊರಗೆ ಕೆಲಸಕ್ಕೆ ಹೋಗುತ್ತಾರೆ. ಒಂದಿಷ್ಟು ಮಹಿಳೆಯರು ಅಂಗಡಿ ಮತ್ತು ಹೋಟೆಲ್ ವ್ಯಾಪಾರದಲ್ಲಿ ತೊಡಗಿದ್ದು, ಕೆಲವು ಮಹಿಳೆಯರು ಕೋಳಿಪಾಳ್ಯದಲ್ಲಿರುವ ಮೈರಾಡ ಸಂಸ್ಥೆಯ ಹೊಲಿಗೆ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಬಾನವಾಡಿ ಗಿರಿಜನ ಮಹಿಳೆ ಮತ್ತು ಮಕ್ಕಳಿಗೆ ಸ್ವಯಂ ಸೇವಾ ಸಂಸ್ಥೆಯೊಂದು ಹೊಲಿಗೆ ತರಬೇತಿ ನೀಡುತ್ತಿದೆ. ದೊಡ್ಡ ಮೂಡಳ್ಳಿಯ ಚೇತನ ಹವ್ಯಾಸಿ ಬಳಗವು ಲಂಬಾಣಿ ಸಮುದಾಯದ ಮಹಿಳೆಯರಿಗೆ ಮತ್ತು ಯುವತಿಯರಿಗೆ ಕಸೂತಿ ತರಬೇತಿಯನ್ನು ನೀಡುತ್ತಿದೆ. ಪುಣಜನೂರಿನ ತೆಂಗಿನ ನಾರು ಘಟಕದಲ್ಲಿ ನಾಲ್ಕೈದು ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಈ ಭಾಗದಲ್ಲಿ ಉನ್ನತ ಶಿಕ್ಷಣ ಪಡೆದ ಹಾಗೂ ಸರ್ಕಾರಿ ನೌಕರಿಯಲ್ಲಿರುವ ಮಹಿಳೆಯರು ಬೆರಳೆಣಿಕೆಯಷ್ಟಿದ್ದಾರೆ. ಸಮುದಾಯದೊಂದಿಗೆ ಒಡನಾಟ ಇಟ್ಟುಕೊಂಡು ವಿವಿಧ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿರುವ ಮಹಿಳೆಯರು ಇದ್ದಾರೆ. ಅವರಲ್ಲಿ ಮುಖ್ಯವಾಗಿ ಪಂಚಾಯಿತಿ ಹಾಗೂ ಗ್ರಾಮಮಟ್ಟದಲ್ಲಿ ತಾಲ್ಲೂಕು ಪಂಚಾಯಿತಿ ಸದಸ್ಯರಾದ ರಂಗಸಂದ್ರದ ಮಹದೇವಮ್ಮ, ಬಾನುವಾಡಿಯ ಮಾಜಿ ಗ್ರಾಮ ಪಂಚಾಯಿತಿ ಸದಸ್ಯೆ ಬಸಮ್ಮ, ಪ್ರಸ್ತುತ ಪಂಚಾಯಿತಿ ಸದಸ್ಯರಾದ ರತ್ನಮ್ಮ, ಪುಣಜನೂರು ಗೇಟ್‌ನ ಜಯಬಾಯಿ, ಷಾ ತಾಜ್ ಬೇಗಂ ಹಾಗೂ ಮಹಿಳಾ

ಸಂಘಗಳನ್ನು ಸಂಘಟಿಸಿ ಮುನ್ನಡೆಸುತ್ತಿರುವ ವೀರಯ್ಯನಪುರದ ರಾಜಮ್ಮ, ಕೋಳಿಪಾಳ್ಯದ ಲಚ್ಚಿಬಾಯಿ, ಪುಣಜನೂರು ಗೇಟ್‌ನ ಜಮ್ರುದ ಬೇಗಂ, ಲಂಬಾಣಿ ಉಡುಗೆ ತಯಾರಿಸುವ ಕಸೂತಿ ಕೆಲಸದ ಸಂಪನ್ಮೂಲ ವ್ಯಕ್ತಿಯಾಗಿರುವ ಕೋಳಿಪಾಳ್ಯದ ತೊಳಚಮ್ಮಬಾಯಿ ಮುಖ್ಯವಾಗಿದ್ದಾರೆ.

ಈ ಪ್ರದೇಶದಲ್ಲಿ ನೀಡುವ ಕೂಲಿಯಲ್ಲಿ ತಾರತಮ್ಯವಿದ್ದು ಪುರುಷರಿಗೆ ೨೦೦ ರೂಪಾಯಿಗಳಾದ್ದರೆ, ಮಹಿಳೆಯರಿಗೆ ೧೦೦ ರೂಪಾಯಿಗಳ ಕೂಲಿ ಇದೆ. ಶೈಕ್ಷಣಿಕ ಅವಕಾಶದಲ್ಲಿ, ಮದುವೆಯ ಆಯ್ಕೆಯಲ್ಲಿ ತಾರತಮ್ಯ ಎದ್ದು ಕಾಣುತ್ತದೆ. ಇತರೆ ಸಮುದಾಯಗಳ ಮಹಿಳೆಯರಿಗೆ ಹೋಲಿಸಿದಾಗ ಸೋಲಿಗ ಸಮುದಾಯದಲ್ಲಿ ಮದುವೆ, ವಿಧವಾ ವಿವಾಹ, ವಿಚ್ಛೇದ ವಿಷಯಗಳಲ್ಲಿ, ಶಿಕ್ಷಣ ಪಡೆಯುವಲ್ಲಿ, ಹೊರಗೆ ದುಡಿಯುವುದು ಇವೇ ಮುಂತಾದ ವಿಷಯಗಳಲ್ಲಿ ಸ್ವಲ್ಪ ಮುಕ್ತತೆ ಇದೆ. ಆದರೆ ಲಂಬಾಣಿ, ಬಡಗ ಮತ್ತು ಮುಸ್ಲಿಂ ಸಮುದಾಯದಲ್ಲಿ ಈ ರೀತಿಯ ಮುಕ್ತತೆ ಕಂಡು ಬರುವುದಿಲ್ಲ. ಮೀಸಲಾತಿಯಡಿ ಪುಣಜನೂರು ಪಂಚಾಯಿತಿಯಲ್ಲಿ ಪ್ರಸ್ತುತ ೦೭ ಮಹಿಳೆಯರು ಗ್ರಾಮ ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಈ ಪ್ರದೇಶಗಳಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಪ್ರಬಲವಾಗಿದ್ದು, ಪಂಚಾಯಿತಿ ಅಧಿಕಾರದಲ್ಲಿ ಪುರುಷರ ಪ್ರಭಾವ ಎದ್ದು ಕಾಣುತ್ತಿದೆ. ಪುಣಜನೂರು ಪಂಚಾಯಿತಿ ಅಧ್ಯಕ್ಷೆಯ ಸ್ಥಾನವನ್ನು ವಹಿಸಿಕೊಂಡರೂ ಪ್ರತಿ ಕೆಲಸ ಮತ್ತು ತೀರ್ಮಾನ ತೆಗೆದುಕೊಳ್ಳುವುದು ಅವರ ಪತಿಯೇ ಆಗಿರುತ್ತಾರೆ.

## ಉಪಸಂಹಾರ

ಪುಣಜನೂರು ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು ಪ್ರಾಕೃತಿಕವಾಗಿ, ಭೌಗೋಳಿಕವಾಗಿ, ಸಮಾಜಿಕ ಹಾಗೂ ಸಾಂಸ್ಕೃತಿಕವಾಗಿ ವಿಶೇಷ, ವಿಭಿನ್ನತೆಯನ್ನು ಹೊಂದಿದ್ದು, ಹಬ್ಬ ಮತ್ತು ಜಾತ್ರೆ, ದೇವರ ಪೂಜೆ, ಸಮೂಹಿಕ ಬೋಜನದಲ್ಲಿ ಎಲ್ಲರೂ ಸೇರುತ್ತಾರೆ. ಈ ಪ್ರದೇಶದ ವಿವಿಧ ಸಮುದಾಯಗಳಲ್ಲಿ ಸ್ಪರ್ಧಾತ್ಮಕ ಹಾಗೂ ವ್ಯವಹಾರಿಕ ಮನೋಭಾವ ಹೆಚ್ಚಾಗಿದ್ದು, ಕೆಲಸಕ್ಕಾಗಿ ಹೆಚ್ಚಿನ ಜನರು ವಲಸೆ ಹೋಗುವುದು ಸಾಮಾನ್ಯವಾಗಿದೆ. ಕೃಷಿಯ ಮೇಲಿನ ಅವರ ಅವಲಂಬನೆ ದಿನೇ, ದಿನೇ ಕಡಿಮೆಯಾಗುತ್ತಿದ್ದು, ತಮ್ಮ ಹಿಂದಿನ ಕಲೆ, ಸಂಸ್ಕೃತಿ ಹಾಗೂ ಸಾಮಾಜಿಕ ಮೌಲ್ಯಗಳನ್ನು

ತಿಳಿದುಕೊಂಡು ಹೋಗುವುದು ಹಾಗೂ ಸಮಸ್ಯೆ ಮತ್ತು ಸವಾಲುಗಳನ್ನು ಅರ್ಥೈಸಿಕೊಳ್ಳಬೇಕಾದ ಅವಶ್ಯಕತೆ ಇದೆ. ಈ ಭಾಗದಲ್ಲಿ ಲಂಬಾಣಿ ಸಮುದಾಯವು ಪ್ರಭಾವಶಾಲಿಯಾಗಿದ್ದು, ಆರ್ಥಿಕ, ರಾಜಕೀಯ ಹಾಗೂ ಶೈಕ್ಷಣಿಕವಾಗಿ ಉಳಿದ ಸಮುದಾಯಗಳಿಗಿಂತ ಮುಂಚೂಣಿಯಲ್ಲಿದ್ದಾರೆ. ಪಂಚಾಯಿತಿಯು ಕುಡಿಯುವ ನೀರು, ವಿದ್ಯುತ್ ದೀಪ ಮುಂತಾದ ಸೌಲಭ್ಯಗಳ ಜೊತೆಗೆ ಇಲ್ಲಿನ ಪರಿಸರ, ಸ್ವಚ್ಛತೆ, ಶೌಚಾಲಯ, ಆರೋಗ್ಯ ಮತ್ತು ಶೈಕ್ಷಣಿಕ ವಿಷಯಗಳತ್ತ ಹೆಚ್ಚಿನ ಗಮನ ಹರಿಸುವ ಅಗತ್ಯ ಇದೆ.

**ಪುಣಜನೂರಿನ ವಿವಿಧ ಸಮುದಾಯಗಳ ಸಾಂಸ್ಕೃತಿಕ ವೈವಿಧ್ಯತೆ**





ಲಕ್ಷ್ಮೀ ದೇವಿ ಕೊಂಡದೋತ್ಸವದ ಸಿದ್ಧತೆಯಲ್ಲಿ ಜನರು





ಕೊಂಡೋತ್ಸವ ವೀಕ್ಷಿಸುತ್ತಿರುವ ಜನರು

ಹಬ್ಬದಲ್ಲಿ ಲಂಬಾಣಿ ಮಹಿಳೆಯರ ಕುಣಿತ





ಹಬ್ಬದಲ್ಲಿ ಆಕ್ರಸ್ಟ್ರಾ ನೋಡುತ್ತಿರುವ ಜನರು

ಮಲೆ ಮಹದೇಶ್ವರನ ಬೆಟ್ಟಕ್ಕೆ ಹೊರಟ ಸೋಲಿಗರು





ಶುಂಠಿ ಕೆಲಸ ನಿರತ ಎತ್ತೇಗೌಡನದೊಡ್ಡಿ ಜನರು ವಿಧವಾ ಹಾಗೂ ವೃದ್ಧಾಪ್ಯ ವೇತನ ಪಡೆಯುತ್ತಿರುವವರು



ಸೋಲಿಗರ ಹಿರಿಯ ಮಹಿಳೆಯ ಜೊತೆ ಪಿಸಿ ತಂಡದ ಸದಸ್ಯರ ಮಾತುಕತೆ

## ಅನುಬಂಧಗಳು

**ಅನುಬಂಧ ೧. ಪುಣಜನೂರು ಪಂಚಾಯಿತಿ ಗ್ರಾಮಗಳ ವಿವರ ೨೦೧೧**

| ಅನುಬಂಧ ೧. ಪುಣಜನೂರು ಗ್ರಾಮಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು | | | | | | |
|---|---|---|---|---|---|---|
| ಕ್ರ.ಸಂ | ಗ್ರಾಮಗಳ ಹೆಸರು | ತಾಲ್ಲೂಕು ಕೇಂದ್ರಕ್ಕಿರುವ ದೂರ | ಜನಸಂಖ್ಯೆ ವಿವರ | | | ಗ್ರಾಮದಲ್ಲಿ ವಾಸಿಸುವ ಜನಾಂಗಗಳು |
| | | | ಪುರುಷ | ಮಹಿಳೆ | ಒಟ್ಟು | |
| ೧ | ಬೇಡಗುಳಿ | ೫೦ ಕಿ.ಮೀ | ೪೦೭ | ೪೫೮ | ೮೬೫ | ಸೋಲಿಗ |
| ೨ | ಬೇಡಗುಳಿ ಕಾಲೋನಿ | ೫೦ ಕಿ.ಮೀ | ೦ | ೦ | ೦ | ಸೋಲಿಗ |
| ೩ | ಬಿಸಿಲಗೆರೆ | ೫೨ ಕಿ.ಮೀ | ೦ | ೦ | ೦ | ಸೋಲಿಗ |
| ೪ | ಕಾಡಿಗೆರೆ | ೫೨. ಕಿ.ಮೀ | ೦ | ೦ | ೦ | ಸೋಲಿಗ |
| ೫ | ರಾಮಯ್ಯನಪೋಡು | ೫೧ ಕಿ.ಮೀ | ೦ | ೦ | ೦ | ಸೋಲಿಗ |
| ೬ | ಮಾರಿಗುಡಿಪೋಡು | ೫೦ ಕಿ.ಮೀ | ೦ | ೦ | ೦ | ಸೋಲಿಗ |
| ೭ | ಮೊಣಕೈಪೋಡು | ೫೨ ಕಿ.ಮೀ | ೦ | ೦ | ೦ | ಸೋಲಿಗ |
| ೮ | ಕೆ.ಗುಡಿ (ಕುಂಟ ಗುಡಿ) | | ೩೨ | ೨೬ | ೫೮ | ಸೋಲಿಗ, |
| ೯ | ಕನ್ನೇರಿಕಾಲೋನಿ | | ೧೬೮ | ೧೬೬ | ೩೩೪ | ಸೋಲಿಗ |
| ೧೦ | ಭೂತಾಣಿಪೋಡು | | ೦ | ೦ | ೦ | ಸೋಲಿಗ |
| ೧೧ | ಪುಣಜನೂರು | ೩೪ ಕಿ.ಮೀ | ೬೪೪ | ೬೧೮ | ೧೨೬೨ | ಸೋಲಿಗ, ನಾಯಕ, ಬಡಗ, ಲಿಂಗಾಯಿತ |
| ೧೨ | ಪುಣಜನೂರು ಗೇಟ್ | ೩೨ ಕಿ.ಮೀ | ೦ | ೦ | ೦ | ಸೋಲಿಗ, ನಾಯಕ, ಲಿಂಗಾಯಿತ, ಮುಸ್ಲಿಂ, ಆದಿಕರ್ನಾಟಕ |
| ೧೩ | ಹೊಸಪೋಡು | ೩೧ ಕಿ.ಮೀ | ೭೨ | ೭೧ | ೧೪೩ | ಸೋಲಿಗ |
| ೧೪ | ಮುನೇಶ್ವರ ಕಾಲೋನಿ | ೩೨ಕಿ.ಮೀ | ೧೦೮ | ೧೧೫ | ೨೨೩ | ಸೋಲಿಗ |
| ೧೫ | ಶ್ರೀನಿವಾಸಪುರ ಕಾಲೋನಿ | ೩೧ ಕಿ.ಮೀ | ೧೨೭ | ೧೪೨ | ೨೬೯ | ಸೋಲಿಗ, ಮುಸ್ಲಿಂ |
| ೧೬ | ಬೆಜ್ಜಲಪಾಳ್ಯ | ೩೦ ಕಿ.ಮೀ | ೧೧೪ | ೧೦೭ | ೨೨೧ | ಲಂಬಾಣಿ |
| ೧೭ | ಕೋಳಿಪಾಳ್ಯ | ೨೭.೫ ಕಿ.ಮೀ | ೫೦೫ | ೪೮೯ | ೯೯೪ | ಲಂಬಾಣಿ, ಲಿಂಗಾಯಿತ, ಈಡಿಗ, ಮುಸ್ಲಿಂ, ವಿಶ್ವಕರ್ಮ, ಕ್ಷೌರಿಕ |
| ೧೮ | ವೀರಯ್ಯನಪುರ | ೨೯ ಕಿ.ಮೀ | ೨೭೯ | ೨೩೬ | ೫೧೫ | ಲಂಬಾಣಿ, ಈಡಿಗ |
| ೧೯ | ಎತ್ತೇಗೌಡನದೊಡ್ಡಿ | ೩೦ ಕಿ.ಮೀ | ೯೧ | ೮೬ | ೧೭೭ | ಸೋಲಿಗ, ಲಂಬಾಣಿ |
| ೨೦ | ಮೂಕನಪಾಳ್ಯ | ೨೯ ಕಿ.ಮೀ | ೪೨೮ | ೩೦೧ | ೭೨೯ | ಲಂಬಾಣಿ |
| ೨೧ | ಬಾನವಾಡಿ | ೨೭.೫ ಕಿ.ಮೀ | ೧೦೮ | ೧೪೧ | ೨೪೯ | ಸೋಲಿಗ |
| ೨೨ | ಗೋಡೆಮಡು | ೨೬ ಕಿ.ಮೀ | ೭೧ | ೮೧ | ೧೫೨ | ಸೋಲಿಗ |
| ೨೩ | ದೊಡ್ಡಮೂಡಳ್ಳಿ | ೨೪ ಕಿ.ಮೀ | ೨೨೮ | ೧೯೨ | ೪೨೦ | ಆದಿ ಕಾರ್ನಾಟಕ (ಆದಿ ಜಾಂಬವ, ಲಂಬಾಣಿ), ಸೋಲಿಗ, ಲಿಂಗಾಯಿತ |
| ೨೪ | ಚಿಕ್ಕಮೂಡಳ್ಳಿ | ೨೫ ಕಿ.ಮೀ | ೫೨ | ೫೩ | ೧೦೫ | ಆದಿ ಕಾರ್ನಾಟಕ |
| ೨೫ | ರಂಗಸಂದ್ರ (ಬೂದಿ ಪಡಗ) | ೨೬ ಕಿ.ಮೀ | ೩೩೦ | ೨೯೫ | ೬೨೫ | ಲಂಬಾಣಿ, ಸೋಲಿಗ |
| ೨೬ | ಹೊನ್ನೇಗೌಡನಹಳ್ಳಿ – ಬೆಚರೆ ಗ್ರಾಮ | | ೧೨ | ೫ | ೧೭ | |
| | ಕುಳ್ಳೂರು | ೨೪ ಕಿ.ಮೀ | ೨೫೪ | ೨೨೨ | ೪೭೬ | ಸೋಲಿಗ, ಆದಿಕರ್ನಾಟಕ, ಮುಸ್ಲಿಂ, ಕುರುಬಗೌಡ |
| | ಕೆ.ಗುಡಿ ಅರಣ್ಯ ವಲಯ | | ೯೨ | ೯೩ | ೧೮೫ | |
| | | | ೪೧೨೨ | ೩೮೯೭ | ೮೦೧೯ | |

**ಅನುಬಂಧ ೨. ಪುಣಜನೂರು ಪಂಚಾಯಿತಿ ಸದಸ್ಯರ ವಿವರ ೨೦೧೧**

| ಕ್ರ.ಸಂ. | ಹೆಸರು | ಪದನಾಮ | ಆಯ್ಕೆಯಾದ ಗ್ರಾಮ | ಜಾತಿ | ವಿದ್ಯಾರ್ಹತೆ |
|---|---|---|---|---|---|

| | | | | | |
|---|---|---|---|---|---|
| ೧ | ಕುಮಾರಿಬಾಯಿ | ಅಧ್ಯಕ್ಷರು | ಬೇಡಗುಳಿ | ಪ.ಜಾ (ಲಂಬಾಣಿ) | ೪ನೇ ತರಗತಿ |
| ೨ | ಶಾಂತಮ್ಮ | ಉಪಾಧ್ಯಕ್ಷರು | ಪುಣಜನೂರು | ಬಿಸಿಎಂ–ಎ | ೮ನೇ ತರಗತಿ |
| ೩ | ಎಚ್.ಮೂರ್ತಿ | ಸದಸ್ಯರು | ಪುಣಜನೂರು | ಪ.ಜಾ | ೭ನೇ ತರಗತಿ |
| ೪ | ಚನ್ನಂಜಮ್ಮ | ,, | ಪುಣಜನೂರು | ಪ.ಪಂ | ಓದಿಲ್ಲ |
| ೫ | ಶಬಿನಾಬಾನು | ,, | ಪುಣಜನೂರು | ಅಲ್ಪಸಂಖ್ಯಾತ | ಓದಿಲ್ಲ |
| ೬ | ವಿ.ಮಹದೇವ | ,, | ಬೇಡಗುಳಿ | ಪ.ಪಂ | ಮೆಟ್ರಿಕ್ |
| ೭ | ಮಲ್ಲಿಗಾಬಾಯಿ | ,, | ಮೂಕನಪಾಳ್ಯ | ಪ.ಜಾ (ಲಂಬಾಣಿ) | ೮ನೇ ತರಗತಿ |
| ೮ | ರಂಗಸ್ವಾಮಿ | ,, | ಮೂಕನಪಾಳ್ಯ | ಪ.ಪಂ | ಪಿಯುಸಿ |
| ೯ | ಕುಮಾರನಾಯ್ಕ | ,, | ಕೋಳಿಪಾಳ್ಯ | ಪ.ಜಾ (ಲಂಬಾಣಿ) | ೮ನೇ ತರಗತಿ |
| ೧೦ | ಪುಟ್ಟಸ್ವಾಮಿಗೌಡ | ,, | ಕೋಳಿಪಾಳ್ಯ | ಬಿಸಿಎಂ–ಎ | ಓದಿಲ್ಲ |
| ೧೧ | ಸಿದ್ದಮ್ಮ | ,, | ಕೋಳಿಪಾಳ್ಯ | ಬಿಸಿಎಂ–ಎ | ಓದಿಲ್ಲ |
| ೧೨ | ರತ್ನಮ್ಮ | ,, | ಬಾನುವಾಡಿ | ಪ.ಪಂ | ೨ನೇ ತರಗತಿ |
| ೧೩ | ಜಡೆಯಪ್ಪ | ,, | ರಂಗಸಂದ್ರ/ಬೂದಿಪಡಗ | ಪ.ಪಂ | ಮೆಟ್ರಿಕ್ |
| ೧೪ | ಎಸ್.ರಮೇಶನಾಯ್ಕ | ,, | ರಂಗಸಂದ್ರ/ಬೂದಿಪಡಗ | ಪ.ಜಾ (ಲಂಬಾಣಿ) | ಬಿಬಿಎಂ ಓದುತ್ತಿದ್ದಾರೆ |
| ೧೫ | ಉಲ್ಲಾಸ್‌ನಾಯ್ಕ | ,, | ಕೆ.ಗುಡಿ | ಪ.ಜಾ (ಲಂಬಾಣಿ) | ಪಿಯುಸಿ |
| ೧೬ | ರುದ್ರೇಗೌಡ | ,, | ಮೂಡಳ್ಳಿ | ಪ.ಪಂ | ಓದಿಲ್ಲ |
| ೧೭ | ಬಿ.ರಮೇಶ್ | ,, | ಮೂಡಳ್ಳಿ | ಬಿಸಿಎಂ–ಎ | ೮ನೇ ತರಗತಿ |